# ಜನತಾವಾಣಿ


ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಫೆಬ್ರವರಿ 28, 2022

ಸಂಪುಟ : 48 ಸಂಚಿಕೆ : 289 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಓಂಬುಡ್ಸ್‌ಮನ್ ನೇಮಿಸದಿದ್ದರೆ ಉದ್ಯೋಗ ಖಾತ್ರಿ ಅನುದಾನವಿಲ್ಲ



**ರಾಜ್ಯಗಳಿಗೆ ಕೇಂದ್ರ ಸರ್ಕಾರದ ಸೂಚನೆ**

ನವದೆಹಲಿ, ಫೆ. 27 – ರಾಜ್ಯಗಳು ತಮ್ಮಲ್ಲಿರುವ ಜಿಲ್ಲೆಗಳ ಪೈಕಿ ಶೇ.80ರಷ್ಟರಲ್ಲಿ ಓಂಬುಡ್ಸ್‌ಮನ್‌ಗಳನ್ನು ನೇಮಿಸದೇ ಹೋದರೆ ಮುಂದಿನ ವರ್ಷದಿಂದ ಉದ್ಯೋಗ ಖಾತ್ರಿ ಹಣ ಬಿಡುಗಡೆ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಬಿಜೆಪಿ ಆಡಳಿತದ ಗುಜರಾತ್, ಅರುಣಾಚಲ ಪ್ರದೇಶ ಮತ್ತು ಗೋವ, ಟಿ.ಆರ್.ಎಸ್. ಆಡಳಿತದ ತೆಲಂಗಾಣ, ಕೇಂದ್ರಾಡಳಿತ ಪ್ರದೇಶಗಳಾದ ಪುದುಚೆರಿ, ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ, ದಾದ್ರ ನಗರ ಹವೇಲಿಗಳು ಉದ್ಯೋಗ ಖಾತ್ರಿಗಾಗಿ ಒಬ್ಬ ಓಂಬುಡ್ಸ್‌ಮನ್ ಸಹ ನೇಮಿಸಿಲ್ಲ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ವೆಬ್ ತಾಣದಲ್ಲಿ ತಿಳಿಸಲಾಗಿದೆ.

ಕಾಂಗ್ರೆಸ್ ಆಡಳಿತದ ರಾಜಸ್ಥಾನ ಮತ್ತು ಪಂಜಾಬ್, ತೃಣಮೂಲ ಕಾಂಗ್ರೆಸ್ ಆಡಳಿತದ ಪಶ್ಚಿಮ ಬಂಗಾಳಗಳ, ಬಿಜೆಪಿ ಆಡಳಿತದ ಹರಿಯಾಣ, ಕೆಲವು ಓಂಬುಡ್ಸ್‌ಮನ್‌ಗಳನ್ನು ನೇಮಿಸಲಾಗಿದೆ.

ರಾಜ್ಯಗಳು ಎಲ್ಲಾ ಜಿಲ್ಲೆಗಳಲ್ಲಿ ಓಂಬುಡ್ಸ್‌ಮನ್‌ಗಳನ್ನು ನೇಮಿಸುವುದು ಸೂಕ್ತ. ಆದರೆ, ಕನಿಷ್ಠ ಶೇ.80ರಷ್ಟು ಜಿಲ್ಲೆಗಳಲ್ಲಿ ಓಂಬುಡ್ಸ್‌ಮನ್ ನೇಮಿಸದ ರಾಜ್ಯಗಳಿಗೆ ಮುಂದಿನ ವರ್ಷದಿಂದ ಉದ್ಯೋಗ ಖಾತ್ರಿ ಅನುದಾನ ಬಿಡುಗಡೆ ಮಾಡುವುದಿಲ್ಲ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ನಾಗೇಂದ್ರ ನಾಥ ಸಿನ್ಹ ಹೇಳಿದ್ದಾರೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರು ಕಳೆದ ಗುರುವಾರ ಉದ್ಯೋಗ ಖಾತ್ರಿಗಾಗಿ ಓಂಬುಡ್ಸ್‌ಮನ್ ಆಪ್ ಬಿಡುಗಡೆ ಮಾಡಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ್ದ ಅವರು, ಹಲವು ರಾಜ್ಯಗಳು ಓಂಬುಡ್ಸ್‌ಮನ್ ನೇಮಕ ಮಾಡಿಲ್ಲ. ಕೆಲ ರಾಜ್ಯಗಳು ರಾಜಕೀಯ ವ್ಯಕ್ತಿಗಳನ್ನೇ ಈ ಹುದ್ದೆಗೆ ನೇಮಿಸಿವೆ ಎಂದು ಕಳವಳ ವ್ಯಕ್ತಪಡಿಸಿದ್ದರು.

ಉದ್ಯೋಗ ಖಾತ್ರಿಯಲ್ಲಿರುವ ನಿಯಮಗಳ ಪ್ರಕಾರ, ಓಂಬುಡ್ಸ್‌ಮನ್ ನೇಮಿಸದ ರಾಜ್ಯಗಳಿಗೆ ಅನುದಾನ ಬಿಡುಗಡೆ ಮಾಡುವುದಿಲ್ಲ ಎಂದೂ ಅವರು ಹೇಳಿದ್ದರು.

ಓಂಬುಡ್ಸ್‌ಮನ್ ಆಪ್ ಮೂಲಕ ಉದ್ಯೋಗ ಖಾತ್ರಿ ಯೋಜನೆಯನ್ನು ಮತ್ತಷ್ಟು ಪಾರದರ್ಶಕಗೊಳಿಸುವಂತೆಯೂ ಸಚಿವರು ರಾಜ್ಯಗಳಿಗೆ ಮನವಿ ಮಾಡಿಕೊಂಡಿದ್ದರು.

ಉದ್ಯೋಗ ಖಾತ್ರಿ ಯೋಜನೆಯ ಅನ್ವಯ ರಾಜ್ಯಗಳು ಪ್ರತಿ ಜಿಲ್ಲೆಯಲ್ಲಿ ಓಂಬುಡ್ಸ್‌ಮನ್ ನೇಮಿಸುವುದು ಕಡ್ಡಾಯ. ಇವರು ಖಾತ್ರಿ ಯೋಜನೆಗಳ ಕುರಿತ ದೂರುಗಳ ತನಿಖೆ ನಡೆಸಿ ಆದೇಶ ಹೊರಡಿಸುತ್ತಾರೆ.

# ಉಕ್ರೇನ್ ಬೀದಿಗಳಲ್ಲಿ ಕಾಳಗ

## ಸಮುದ್ರ ತೀರದ ನಗರಗಳು ರಷ್ಯಾ ವಶ

ಕೀವ್, ಫೆ. 27 – ಉಕ್ರೇನ್‌ನ ಎರಡನೇ ಅತಿ ದೊಡ್ಡ ನಗರವಾದ ಖಾರ್ಕೀವ್‌ಗೆ ರಷ್ಯಾ ಸೈನ್ಯ ನುಗ್ಗಿದ್ದು, ಬೀದಿ ಕಾಳಗ ಆರಂಭವಾಗಿದೆ. ರಷ್ಯಾದ ಪಡೆಗಳು ದಕ್ಷಿಣ ಭಾಗದ ಪ್ರಮುಖ ಬಂದರುಗಳತ್ತ ನುಗ್ಗಿವೆ. ಉಕ್ರೇನ್‌ನ ವೈಮಾನಿಕ ನೆಲೆ ಹಾಗೂ ತೈಲ ಕೇಂದ್ರಗಳ ಮೇಲೆ ದಾಳಿ ನಡೆಸಿದ ನಂತರ, ರಷ್ಯಾ ಯುದ್ಧವನ್ನು ಮತ್ತೊಂದು ಹಂತಕ್ಕೆ ತೆಗೆದುಕೊಂಡು ಹೋಗಿದೆ.

ನೆಲದ ಮೇಲೆ ನಡೆದ ಹೋರಾಟದಲ್ಲಿ ಮುನ್ನಡೆ ಗಳಿಸಿರುವ ರಷ್ಯಾ, ಉಕ್ರೇನ್ ಜೊತೆ ಮಾತುಕತೆ ನಡೆಸಲು ತನ್ನ ನಿಯೋಗವನ್ನು ಬೆಲಾರಸ್‌ಗೆ ಕಳಿಸಿದೆ.

ಭಾನುವಾರದವರೆಗೆ ರಷ್ಯಾ ಪಡೆಗಳು ಉಕ್ರೇನ್‌ನ ಎರಡನೇ ಅತಿ ದೊಡ್ಡ ನಗರವಾದ ಖಾರ್ಕೀವ್ ಹೊರ ವಲಯದಲ್ಲಿದ್ದವು. ಈಗ ಸೈನ್ಯವನ್ನು ನಗರದ ಒಳಗೆ ನುಗ್ಗಿಸಲಾಗಿದೆ. ಈ ನಗರ ರಷ್ಯಾ ಗಡಿಯಿದ ಕೇವಲ 20 ಕಿ.ಮೀ. ದೂರದಲ್ಲಿದೆ.

ದೇಶಕ್ಕಾಗಿ ಹೋರಾಟ ನಡೆಸಲು ಸಿದ್ಧ ಇರುವ ಸೈನ್ಯದ ಅನುಭವ ಇರುವ ಬಂಧಿತರನ್ನು ಉಕ್ರೇನ್ ಸರ್ಕಾರ ಬಿಡುಗಡೆ ಮಾಡಿದೆ.

ಶನಿವಾರ ರಾತ್ರಿ ಭಾರೀ ಪ್ರಮಾಣದಲ್ಲಿ ವಸತಿ ಪ್ರದೇಶಗಳು ಹಾಗೂ ನಾಗರಿಕ ಸೌಲಭ್ಯಗಳ ಮೇಲೆ ಶೆಲ್ ದಾಳಿ ನಡೆಸಲಾಗಿದೆ. ಕೀವ್ ನಗರದಲ್ಲಿ ಭಾನುವಾರ ಬೆಳಿಗ್ಗೆ ಭಾರೀ ದಾಳಿ ನಡೆಸಿದ್ದು ಕಂಡು ಬಂತು. ಜನರು ಮನೆಗಳ ನೆಲಮಾಳಿಗೆ, ಭೂಗತ ಗ್ಯಾರೇಜ್ ಹಾಗೂ ಸಬ್‌ವೇ ಗಳಲ್ಲಿ ಆಶ್ರಯ ಪಡೆದ್ದಾರೆ.

ಕೀವ್ ಬಳಿ ಇರುವ ವೈಸಿಲ್ಕಿವ್ ವಾಯುನೆಲೆಯ ತೈಲಾಗಾರದ ಮೇಲೆ ದಾಳಿ ನಡೆಸಲಾಗಿದೆ. ಖಾರ್ಕೀವ್ ನಗರಕ್ಕೆ ಅನಿಲ ಪೂರೈಸುವ ಕೊಳವೆ ಮಾರ್ಗವನ್ನು ಧ್ವಂಸಗೊಳಿಸಲಾಗಿದೆ. ಇದರಿಂದ ತೀವ್ರ ಹೊಗೆ ಉಂಟಾಗಿದ್ದು, ಜನ ಮುನ್ನೆಚ್ಚರಿಕೆ ವಹಿಸಲು ಅಧಿಕಾರಿಗಳು ತಿಳಿಸಿದ್ದಾರೆ.

ಕಪ್ಪುಸಮುದ್ರದ ದಡದಲ್ಲಿರುವ ಖೆರ್ಸನ್ ಹಾಗೂ ಅಜೋವ್ ಸಮುದ್ರದ ಬಂದರು ನಗರ ಬರ್ಡಿಯಾಸ್ಕ್‌ಗಳಿಗೆ ರಷ್ಯಾ ಸೈನ್ಯ ದಿಗ್ಬಂಧನ ಹೇರಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗೊರ್ ಕೊನಶೆಂಕೊವ್ ಹೇಳಿದ್ದಾರೆ.

ಖೆರ್ಸೋನ್ ನಗರದ ಬಳಿಯ ವಾಯುನೆಲೆ ಹಾಗೂ ಹೆನಿಶೆಸ್ಕ್ ನಗರಗಳನ್ನೂ ವಶಕ್ಕೆ ಪಡೆಯಲಾಗಿದೆ. ಒಡೆಸಾ, ಮೈಕೊಲೇವ್ ಹಾಗೂ ಇತರೆ ಪ್ರದೇಶಗಳಲ್ಲಿ ಹೋರಾಟ ನಡೆಯುತ್ತಿದೆ ಎಂದವರು ಹೇಳಿದ್ದಾರೆ.

ಕರಾವಳಿಯ ಸಂಪರ್ಕ ಕಡಿತಗೊಳ್ಳುವಂತೆ ಮಾಡುವುದು ಉಕ್ರೇನ್ ಆರ್ಥಿಕತೆಗೆ ದೊಡ್ಡ ಹೊಡೆತ ನೀಡಲಿದೆ. (2ನೇ ಪುಟಕ್ಕೆ)



**ರಷ್ಯಾದ ಹಲವು ಸೈನಿಕ ವಾಹನಗಳು ನಗರದ ಬೀದಿಗಳಲ್ಲಿ ಚಲಿಸುತ್ತಿರುವ ವಿಡಿಯೋಗಳನ್ನು ಉಕ್ರೇನ್ ಮಾಧ್ಯಮಗಳು ಪ್ರಕಟಿಸಿವೆ. ಒಂದು ವಿಡಿಯೋದಲ್ಲಿ ರಷ್ಯಾದ ಸಮರ ವಾಹನದ ಮೇಲೆ ಉಕ್ರೇನ್ ಸೈನಿಕರು ದಾಳಿ ನಡೆಸುತ್ತಿರುವ ದೃಶ್ಯ ಇದೆ.**

**ಕೀವ್ ಹಾಗೂ ಇತರೆ ನಗರಗಳನ್ನು ರಕ್ಷಿಸಲು ಸೈನಿಕರಿಗೆ ಅಲ್ಲಿನ ನಾಗರಿಕರು ನೆರವಾಗುತ್ತಿದ್ದಾರೆ. ಅಧಿಕಾರಿಗಳು ಬಂದೂಕುಗಳನ್ನು ವಿತರಿಸುತ್ತಿದ್ದು, ರಷ್ಯಾ ಪಡೆಗಳನ್ನು ಎದುರಿಸಲು ಬಾಂಬ್ ದಾಳಿಯ ಸಿದ್ಧತೆಯಲ್ಲಿದ್ದಾರೆ.**





ಪಲ್ಸ್ ಪೋಲಿಯೋ ಅಭಿಯಾನಕ್ಕೆ ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್ ಅವರುಗಳು ಭಾನುವಾರ ಚಾಲನೆ ನೀಡಿದರು.

## ಪಲ್ಸ್ ಪೋಲೀಯೋ ಹಾಕಿಸಿ ಅಂಗವಿಕಲತೆ ಓಡಿಸಿ: ಎಸ್ಸೆಸ್

ದಾವಣಗೆರೆ, ಫೆ.27- ಸರ್ಕಾರಗಳು ಪ್ರತಿ ವರ್ಷ ನೀಡುವ ಪಲ್ಸ್ ಪೋಲಿಯೋ ಹನಿ ಹಾಕಿಸುವ ಮೂಲಕ ಮಕ್ಕಳನ್ನು ಅಂಗವಿಕಲತೆಯಿಂದ ದೂರವಿಡಬೇಕೆಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಜನತೆಗೆ ಕರೆ ನೀಡಿದರು.

ಇಂದಿನಿಂದ ದೇಶಾದ್ಯಂತ 5 ದಿನಗಳ ಕಾಲ ಸರ್ಕಾರ ಹಮ್ಮಿಕೊಂಡಿರುವ ಪಲ್ಸ್ ಪೋಲಿಯೋ ಹನಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದಲ್ಲಿ ಪೋಲಿಯೋ ದಿಂದಾಗಿ ಅಂಗವಿಕಲತೆಯಿಂದ ಸಾಕಷ್ಟು ಜನರಿಗೆ ತೊಂದರೆಯಾಗಿದ್ದು, ಇದನ್ನು ಹೋಗಲಾಡಿಸಬೇಕೆಂಬ ಉದ್ದೇಶದಿಂದ ದೇಶಾದ್ಯಂತ 5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕಿಸಲಾಯಿತು. ಸುಮಾರು 10 ವರ್ಷಗಳಿಂದೀಚೆಗೆ ಯಾವುದೇ ಪೋಲಿಯೋ ಪ್ರಕರಣಗಳು ದಾಖಲಾಗಿಲ್ಲ. ಆದರೂ ಮುಂದಿನ ದಿನಗಳಲ್ಲಿ ತೊಂದರೆ ಆಗಬಾರದೆಂಬ ಕಾರಣಕ್ಕೆ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಪೋಲಿಯೋ ಇನ್ನು ಬೇರೆ ದೇಶಗಳಲ್ಲಿದ್ದು, ಅನೇಕ ಮಕ್ಕಳು ಅಂಗವಿಕಲರಾಗಿದ್ದಾರೆ. ಪೋಷಕರು ತಮ್ಮ 5 ವರ್ಷದೊಳಗಿನ ಮಕ್ಕಳನ್ನು ಸಮೀಪದಲ್ಲಿರುವ ಲಸಿಕಾ ಕೇಂದ್ರಗಳಿಗೆ ಕರೆದುಕೊಂಡು ಹೋಗಿ ಪೋಲಿಯೋ ಹನಿ ಹಾಕಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಜಿ.ಎಸ್.ಮಂಜುನಾಥ್ ಗಡಿಗುಡಾಳ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಆರ್.ಜಿ.ಧನೇಶ್, ಟಿಹೆಚ್ಓ ಡಾ|| ವೆಂಕಟೇಶ್, ವೈದ್ಯಾಧಿಕಾರಿ ಡಾ|| ರಾಘವೇಂದ್ರ, ಉಮಾಬಾಯಿ ಎಸ್., ಗಾಯತ್ರಿ ಮತ್ತಿತರರಿದ್ದರು.

## ಶಾಲೆಗಳನ್ನು ಸುಂದರಗೊಳಿಸಿದ ಹರಪನಹಳ್ಳಿ ಕನ್ನಡ ಪ್ರತಿಷ್ಠಾನ

ಹರಪನಹಳ್ಳಿ, ಫೆ.27- ಕನ್ನಡ ಮನಸುಗಳು ಪ್ರತಿಷ್ಠಾನ ಎಂಬ ಕನ್ನಡಪರ ಸಂಸ್ಥೆಯು ರಾಜ್ಯದ ವಿವಿಧ ಭಾಗಗಳಲ್ಲಿ ಸ್ವಯಂಸೇವಕರನ್ನು ಹೊಂದಿದ್ದು, ಕನ್ನಡಪರ ಹೋರಾಟಗಳಲ್ಲೂ ಸಹ ತೊಡಗಿಸಿಕೊಂಡಿರುವ ಈ ತಂಡವು ತಾಲ್ಲೂಕಿನ ಇ.ಬೇವಿನಹಳ್ಳಿ ಮತ್ತು ಕೆ.ಕಲ್ಲಹಳ್ಳಿ ಗ್ರಾಮದ ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಂಡು, ಶನಿವಾರ ಮತ್ತು ಭಾನುವಾರ ಎರಡು ದಿನಗಳ ಕಾಲ ಶಾಲೆಗಳಿಗೆ ಬಣ್ಣ ಬಳಿದು ಸೌಂದರ್ಯೀಕರಣಗೊಳಿಸಿದ್ದಾರೆ.


ತಂಡವು ಸುಮಾರು 3 ವರ್ಷಗಳಿಂದ 'ಸರ್ಕಾರಿ ಶಾಲೆ ಉಳಿಸಿ' ಎಂಬ ಅಭಿಯಾನ ಆರಂಭಿಸಿದ್ದು, ಅಳಿವಿನಂಚಿನಲ್ಲಿರುವ ಮತ್ತು ಕನ್ನಡ ಮಕ್ಕಳಿಗೆ ಅಗತ್ಯವಿರುವ ಶಾಲೆಗಳನ್ನು ಗುರುತಿಸಿ, ದಾನಿಗಳು ಮತ್ತು ಇತರೆ ಸಂಘ-ಸಂಸ್ಥೆಗಳ ನೆರವಿನಿಂದ ತಂಡದ ಸ್ವಯಂ ಸೇವಕರ ಮೂಲಕ ಶಾಲೆಗೆ ಹೋಗಿ ಬಣ್ಣ ಬಳಿದು ಸೌಂದರ್ಯೀಕರಣಗೊಳಿಸುವುದು ಮತ್ತು ಸಾಧ್ಯವಾದಷ್ಟು ಮೂಲಭೂತ ಅಗತ್ಯತೆಗಳನ್ನು ಪೂರೈ ಸುವುದು ಈ (2ನೇ ಪುಟಕ್ಕೆ)

## ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಚುನಾವಣೆ ಶಾಂತಿಯುತ

ದಾವಣಗೆರೆ, ಫೆ. 27- ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘಕ್ಕೆ ಭಾನುವಾರ ನಡೆದ ಚುನಾವಣೆ ಶಾಂತಿಯುತವಾಗಿ ನಡೆಯಿತು. ಜಿಲ್ಲೆಯ ಎಲ್ಲಾ ತಾಲ್ಲೂಕುಗಳ 269 ಹಾಗೂ ದಾವಣಗೆರೆ ನಗರದ 269 ಪತ್ರಕರ್ತರ ಪೈಕಿ 248 ಪತ್ರಕರ್ತರು ತಮ್ಮ ಹಕ್ಕು ಚಲಾಯಿಸಿದರು. ಶೇ.95ರಷ್ಟು ಮತದಾನ ವಾಗಿದೆ. ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಫಲಿತಾಂಶವನ್ನು ಪ್ರಕಟಿಸಲಾಗಿಲ್ಲ.

## ಅಧಿವೇಶನ ನಂತರ ರಾಜ್ಯ ಪ್ರವಾಸ

### ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ: ಬಿಎಸ್‌ವೈ




ಬೆಂಗಳೂರು, ಫೆ. 27 – ಬಿಜೆಪಿಯನ್ನು ಮುಂದಿನ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ತರಲು ಬಜೆಟ್ ಅಧಿವೇಶನದ ನಂತರ ರಾಜ್ಯಾದ್ಯಂತ ಪ್ರವಾಸ ಮಾಡುವುದಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಭಾನುವಾರ ಯಡಿಯೂರಪ್ಪನವರಿಗೆ 79 ವರ್ಷ ತುಂಬಿದ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಸಾರ್ವಜನಿಕರು ಹಾಗೂ ಮುಖಂಡರು ಅಭಿನಂದನೆ ಸಲ್ಲಿಸಿದರು. ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡುತ್ತಿದ್ದರು.

ಜನರ ಆಶೀರ್ವಾದದಿಂದಾಗಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವ ವಿಶ್ವಾಸವಿದೆ. ಬಿಜೆಪಿಯನ್ನು ಅಧಿಕಾರಕ್ಕೆ ತರಲು ನಾವೆಲ್ಲ ಶಕ್ತಿ ಮೀರಿ ಸಾಮೂಹಿಕ ಪ್ರಯತ್ನ ನಡೆಸಲಿದ್ದೇವೆ ಎಂದವರು (2ನೇ ಪುಟಕ್ಕೆ)

## ಮಾದಿಗರಿಗೆ ತಕ್ಕ ಮೀಸಲು ಸಿಗುತ್ತಿಲ್ಲ

### ಮಾದಿಗ ದಂಡೋರ ಸಮಿತಿ ಸಂಸ್ಥಾಪಕ ಮಂದಕೃಷ್ಣ ಮಾದಿಗ ಬೇಸರ



ದಾವಣಗೆರೆ, ಫೆ.27- ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗ, ಮನಮೋಹನ್‌ಸಿಂಗ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ನ್ಯಾಯಮೂರ್ತಿ ಉಷಾ ಮೆಹ್ರಾ ಆಯೋಗ ರಚಿಸಿ ಪಡೆದ ವರದಿಗಳನ್ನು ಕಾಂಗ್ರೆಸ್ ಜಾರಿಗೊಳಿಸಲಿಲ್ಲ. ಬಿಜೆಪಿ ಕೂಡ ಅದೇ ಚಾಳಿ ಮುಂದುವರಿಸಿದೆ ಎಂದು ಮಾದಿಗ ದಂಡೋರ ಸಮಿತಿಯ ಸಂಸ್ಥಾಪಕ, ರಾಷ್ಟ್ರೀಯ ಅಧ್ಯಕ್ಷ ಮಂದಕೃಷ್ಣ ಮಾದಿಗ ಆಕ್ಷೇಪಿಸಿದರು.

ಅವರು, ಇಂದು ನಗರದ ಗಾಂಧಿನಗರದಲ್ಲಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ವರದಿ ಜಾರಿಗೆ ಆಗ್ರಹಿಸಿ ಮಾದಿಗ ದಂಡೋರ ದಾವಣಗೆರೆ-ಚಿತ್ರದುರ್ಗ ಜಿಲ್ಲಾ ಸಮಿತಿಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಮಾಜ ಜಾಗೃತಿ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಮಾದಿಗರ ಜನಸಂಖ್ಯೆಗೆ ತಕ್ಕ ಮೀಸಲು ಸಿಗುತ್ತಿಲ್ಲ. ಶೇ.15ರಷ್ಟು ಮೀಸಲಲ್ಲಿ ಮಾದಿಗರಿಗೆ ಪ್ರತಿಶತ ಮೂರರಷ್ಟು ಮಾತ್ರ ಸಿಗುತ್ತಿದೆ. ಶಿಕ್ಷಣ, ಔದ್ಯೋಗಿಕ ಕ್ಷೇತ್ರದಲ್ಲೂ ಸರಿಯಾದ ಪಾಲು ಸಿಗುತ್ತಿಲ್ಲ. ಎಸ್ಸಿ ಪಟ್ಟಿಗೆ ಸೇರಲ್ಪಟ್ಟ, ಅಸ್ಪೃಶ್ಯರಲ್ಲದ ಲಂಬಾಣಿ, ಕೊರಚ, ಭೋವಿ ಸಮಾಜಗಳು ನಮ್ಮ ಹಕ್ಕು, ಅವಕಾಶ ಕಿತ್ತುಕೊಂಡಿವೆ ಎಂದು ಬೇಸರ ವ್ಯಕ್ತಪಡಿಸಿದರು.

ವರದಿ ಜಾರಿಯಾಗುವವರೆಗೂ ಹೋರಾಟ ನಿಲ್ಲಿಸುವುದಿಲ್ಲ. ಶೀಘ್ರವೇ ಒಂದು ತಿಂಗಳ ಕಾಲ ಕರ್ನಾಟಕದ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ಸುತ್ತಾಡುವೆ. 10 ಲಕ್ಷ ಜನರನ್ನು ಸೇರಿಸಿ, ಬೆಂಗಳೂರಿಗೆ ದಿಗ್ಬಂಧನ (2ನೇ ಪುಟಕ್ಕೆ)

## ಮೇಕೆದಾಟು ಪಾದಯಾತ್ರೆ ಪುನರಾರಂಭ

**ಪರಿಸರ ಅನುಮತಿ ವಿಳಂಬಕ್ಕೆ ಕಾಂಗ್ರೆಸ್ ನಾಯಕರ ತರಾಟೆ**

ರಾಮನಗರ, ಫೆ. 27 – ಮೇಕೆದಾಟು ಯೋಜನೆ ಜಾರಿಗೆ ತರುವಂತೆ ಒತ್ತಾಯಿಸಿ ಕಾಂಗ್ರೆಸ್ ಪಕ್ಷದ ಪಾದಯಾತ್ರೆಯನ್ನು ಪುನರಾರಂಭಿಲಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಜನವರಿಯಲ್ಲಿ ಪಾದಯಾತ್ರೆ ನಿಲ್ಲಿಸಲಾಗಿತ್ತು.

ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಐದು ದಿನದ ಪಾದಯಾತ್ರೆ ಆರಂಭಿಸಲಾಗಿದೆ.

ಇಲ್ಲಿ ಆರಂಭವಾಗಿರುವ 'ನಮ್ಮ ನೀರು ನಮ್ಮ ಹಕ್ಕು' ಧ್ಯೇಯ ವಾಕ್ಯದ ಪಾದಯಾತ್ರೆ ಮಾರ್ಚ್ 3ರಂದು ಬಸವನಗುಡಿಯ ರಾಷ್ಟ್ರೀಯ ಕಾಲೇಜು ಮೈದಾನದಲ್ಲಿ ಪೂರ್ಣವಾಗಲಿದೆ.

ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ ಹಲವು ನಾಯಕರು ಮೇಕೆದಾಟು ಪಾದಯಾತ್ರೆಯ ಎರಡನೇ ಭಾಗ ಉದ್ಘಾಟಿಸಿದರು.

ಕೊರೊನಾ ಮೂರನೇ ಅಲೆ ಉಲ್ಬಣಿಸಿದ ಕಾರಣಕ್ಕಾಗಿ ಕಳೆದ ತಿಂಗಳು ಜನವರಿ 13ರಂದು ರಾಮನಗರದಲ್ಲಿ ಪಾದಯಾತ್ರೆಯನ್ನು ಅರ್ಧಕ್ಕೇ ನಿಲ್ಲಿಸಲಾಗಿತ್ತು. ಪುನರಾರಂಭಿಸಲಾದ ಪಾದಯಾತ್ರೆ 15 ಕಿ.ಮೀ (2ನೇ ಪುಟಕ್ಕೆ)




**ಸೈಟ್‌ಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30 ಉತ್ತರ, 20x30 ಪೂರ್ವ, ಸಿದ್ದವೀರಪ್ಪ ಬಡಾವಣೆಯಲ್ಲಿ 24x60 ದಕ್ಷಿಣ, 30x50 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ, 30x50 ಪೂರ್ವ-ದಕ್ಷಿಣ ಕಾರ್ನರ್
ಸ್ವಾಮಿ ಏಜೆಂಟ್ ವಿದ್ಯಾನಗರ
ಮೊ.97421 44715

**ಬೇಕಾಗಿದ್ದಾರೆ**
ರಾಣೇಬೆನ್ನೂರು ಬ್ರ್ಯಾಂಚ್‌ಗಾಗಿ ಅನುಭವಿ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ (ಪುರುಷರು) ಬೇಕಾಗಿದ್ದಾರೆ.
ವಿಶ್ವಾಸ್ ಹೈಟೆಕ್ ಡಯಾಗ್ನಸ್ಟಿಕ್ ಸೆಂಟರ್
'ನಿಧಿ' # 413/1, 8ನೇ ಮೇನ್, 8ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ-577002.
99000 96349/92429 40661

**ಮನೆ ಬಾಡಿಗೆಗಿದೆ**
R.M.C. ಲಿಂಕ್ ರಸ್ತೆ, ಅಥಣಿ ಮಿಲ್ ಎದುರಿಗೆ ಸಿಂಗಲ್ ಬೆಡ್ ರೂಂ ಸುಸಜ್ಜಿತ ಎರಡನೇ ಮಹಡಿ ಮನೆ ಬಾಡಿಗೆಗಿದೆ. ಸಂಪರ್ಕಿಸಿ :
94496 09805

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
97388 27452
74110 25934

**ಜಮೀನು ಮಾರಾಟಕ್ಕಿದೆ**
ಕುಣೆಬೆಳಕೆರೆ 10 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ.
@ Rs. 30 Laks / Acre
(12 Kms from Shamanur)
74112 50447

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಕೊಟ್ಟೂರೇಶ್ವರ ಬಡಾವಣೆ ನಿಟುವಳ್ಳಿಯಲ್ಲಿ ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ, ಕಮೋಡ್ ಸಿಸ್ಟಂ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆ/ಲೀಸ್‌ಗೆ ಇದೆ.
96634 65543

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ, ಇಂಗ್ಲಿಷ್ ಓದಲು, ಬರೆಯಲು ಬರುವಂತಹ ಹುಡುಗಿಯರು ಹಾಗೂ ಕೋರಿಯರ್ ಪಾರ್ಸಲ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ (Two Wheeler Bike) ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು. ಸಂಪರ್ಕಿಸಿ
89711 19130, 98800 42597
Whatsaap No. 70199 83025

**ಬೇಕಾಗಿದ್ದಾರೆ**
ಬೇಕರಿ ಮತ್ತು ಜ್ಯೂಸ್ ಕೌಂಟರ್‌ನಲ್ಲಿ SSLC ಆಗಿರುವ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ವಸತಿ ಇರುತ್ತದೆ. ಸಂಪರ್ಕಿಸಿ.
80500 14620

**ಕೆಲಸಕ್ಕೆ ಬೇಕಾಗಿದ್ದಾರೆ**
ರೂಂ ಬಾಯ್ಸ್, ರಿಸಪ್ಷನಿಸ್ಟ್, ಆಯಾ ಮತ್ತು ಸೆಕ್ಯೂರಿಟಿ ಗಾರ್ಡ್ ನಲ್ಲೂರು ಹಾಗೂ ರಾಣೇಬೆನ್ನೂರು ತಾಲ್ಲೂಕು ಹಿಳ್ಳದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಕೆಲವು ಕಡೆ ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಮತ್ತು ಆಕರ್ಷಕ ಸಂಬಳವಿರುತ್ತದೆ.
91085 09541, 98806 48207
74113 07071

**ENGLISH CLASS**
1st std to 9th std Bruit Abacus and Vedic Maths, Nijalingappa Badavane.
96201 53806

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಒದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ (Extended) ಉತ್ತರ 50x80, (ಮುಂದೆ 40 ಅಡಿ ರಸ್ತೆ ಪಕ್ಕ 60 ಅಡಿ ರಸ್ತೆ), ಸರ್ಕಾರಿ ನೌಕರರ ಬಡಾವಣೆ ಉತ್ತರ 40x60 (40 ಅಡಿ ರಸ್ತೆಗೆ) ಕುಂದವಾಡ ಕೆರೆ ಪಕ್ಕ ಪೂರ್ವ 30x54, ಪಶ್ಚಿಮ 30x40
ಐಗೂರು ವಿಜಯಕುಮಾರ್
99457 02495

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟ್‌ಗಳು ಮಾರಾಟಕ್ಕಿವೆ**
30x50 East ಮನೆ, 30x40 North ಮನೆ, 40x60 East, 40x60 West, 40x60 South, 40 ಅಡಿ ರೋಡಿಗಿದೆ. 30x40 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**House for Sale**
30x40 Ground Floor & 1st Floor House Situated at Jayanagar 'A' Block, SS Hospital Road, (Hi-tech) Near Yogi Reddy Building, Davanagere
86187 39278 / 98803 41069

**WANTED**
Sales & Marketing
Accountant Fresher / Experienced
Gnanam Interiors & Exteriors
Authorised partner for Saint Gobain & Fundermax
Hadadi road, Davanagere
Qualification : Any degree with computer knowledge
95133 01260

**ಸೈಟ್ ಮಾರಾಟಕ್ಕಿದೆ**
ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದಲ್ಲಿ ಮುಖ್ಯ ರಸ್ತೆಗೆ 55x40 ಅಳತೆಯ ದಕ್ಷಿಣ ಮತ್ತು ಪಶ್ಚಿಮ ರಸ್ತೆ ಇರುವ ಸಂಜೀವಿನಿ ಆಂಜನೇಯ ದೇವಸ್ಥಾನದ ರಸ್ತೆ, 7ನೇ ಕ್ರಾಸ್ ಕಾರ್ನರ್ ಸೈಟ್ ಮಾರಾಟಕ್ಕಿದೆ.
ಸಂಪರ್ಕಿಸಿ: 94483 73997

**FOR SALE**
3 Bed Room with Attached Bath, Duplex House with Car Garage, 40x51 ft West Face, 12th Cross, S.S. layout 'A' Block, Davanagere
94488 69203

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 02.03.2022ರ ಬುಧವಾರ ಮತ್ತು 03.03.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ,
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಬಾಡಿಗೆಗೆ ಇದೆ**
2ನೇ ಮಹಡಿಯಲ್ಲಿ ವಾಸ್ತು ಹಾಗೂ ಸಕಲ ಸೌಕರ್ಯ ಇರುವ ಸಿಂಗಲ್ ಬೆಡ್‌ರೂಮ್ ಮನೆ ಬಾಡಿಗೆಗೆ ಇದೆ. #1859/34, "ಭಾವ ಸಂಗಮ" ನೂತನ ಕಾಲೇಜು ಹಿಂಭಾಗ, 4ನೇ ಮುಖ್ಯ ರಸ್ತೆ LIC ಕಾಲೋನಿ ದಾವಣಗೆರೆ.
73385 58138, 94487 46875

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ ಅನುಭವವುಳ್ಳ A.N.M ಮತ್ತು G.N.M. ಆದವರು. ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋಡಾಟಾದೊಂದಿಗೆ ಸಂಪರ್ಕಿಸಿ.
M: 98450 35710


**ಮನೆಯ ವಾಸ್ತು ಸಮಸ್ಯೆಗಳಿಗೆ ಸುಲಭ ಪರಿಹಾರಗಳು**
ಉತ್ತರಾಭಿಮುಖವಾಗಿ ದೀಪ ಹಚ್ಚಿದರೆ ಧನ ಧಾನ್ಯ ಲಾಭ.(T&C) ಸಂಪರ್ಕಿಸಿ. ಕಲ್ಪತರು ಕನಸ್ಟ್ರಕ್ಷನ್ಸ್ ದಾವಣಗೆರೆ.
98455 83340

**ಮನೆ ಮತ್ತು ರೂಂ ಲೀಸ್‌ಗಿದೆ**
ಡೋ. ನಂ.1374 ,ಜಯನಗರ 'A' ಬ್ಲಾಕ್, (ಕಾಳಿದಾಸ ಸರ್ಕಲ್ ಹಿಂಭಾಗ) 30x40 ಅಳತೆಯ ನೆಲಮಹಡಿ (2BHK) ಮತ್ತು 2ನೇ ಮಹಡಿಯ ರೂಂ, ಸುಸಜ್ಜಿತ ವ್ಯವಸ್ಥೆಯ ಹೊಸ ಮನೆ ಮತ್ತು ರೂಮ್ ಲೀಸ್‌ಗಿದೆ. ಆಸಕ್ತರು ಸಂಪರ್ಕಿಸಿ.
94827 64316

**ಬಾಡಿಗೆಗಿದೆ**
ಪಿ.ಜೆ. ಎಕ್ಸ್‌ಟೆನ್ಷನ್‌ನಲ್ಲಿ ನರ್ಸಿಂಗ್ ಹೋಮ್‌ಗೆ ಸೂಕ್ತವಾದ 70x40 ಜಾಗ ಬಾಡಿಗೆಗಿದೆ. ಬಾಪೂಜಿ ಆಸ್ಪತ್ರೆ ಹತ್ತಿರ, G + 1 Floor ಆಸಕ್ತರು ಸಂಪರ್ಕಿಸಿ :
98862 62739, 63619 17504


|| ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ||

**ಕೈಲಾಸ ಸಮಾರಾಧನೆಯ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ, ಡಿಸಿಎಂ ಟೌನ್ ಶಿಪ್ ವಾಸಿಯಾದ **ಶ್ರೀಮತಿ ಶ್ರೀ ಗೌಡ್ರು ಎಂ. ಮಂಜುನಾಥ ಮತ್ತು ಸಹೋದರ, ಸಹೋದರಿಯರು, ಸೊಸೆಯಂದಿರು** ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ 08.02.2022ನೇ ಮಂಗಳವಾರ ರಾತ್ರಿ 8.30ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶತಾಯುಷಿ ಶ್ರೀಮತಿ ಗೌಡ್ರು ಮಂಜಮ್ಮನವರು**
(ದಿ|| ಶ್ರೀ ಗೌಡ್ರು ಮಲ್ಲಪ್ಪನವರ ಧರ್ಮಪತ್ನಿ)
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 28.02.2022ರ ಸೋಮವಾರ ಬೆಳಿಗ್ಗೆ 11.30ಕ್ಕೆ ಹಿಂಡಸಕಟ್ಟೆಯ ಸ್ವಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
**ಮೃತರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಗೌಡ್ರ ವಂಶಸ್ಥರು, ಹಿಂಡಸಕಟ್ಟೆ ಹಾಗೂ ಬಂಧು-ಮಿತ್ರರು.**

## ಉಕ್ರೇನ್ ಬೀದಿಗಳಲ್ಲಿ ಕಾಳಗ

**(1ನೇ ಪುಟದಿಂದ)** ಈ ನಡುವೆ, ಉಕ್ರೇನ್‌ಗೆ 350 ದಶಲಕ್ಷ ಡಾಲರ್‌ಗಳ ಹೆಚ್ಚುವರಿ ಸೈನಿಕ ನೆರವು ನೀಡುವುದಾಗಿ ಅಮೆರಿಕ ತಿಳಿಸಿದೆ. ಕ್ಷಿಪಣಿ ಹಾಗೂ ಟ್ಯಾಂಕ್ ವಿರೋಧಿ ಶಸ್ತ್ರಗಳನ್ನು ಕಳಿಸುವುದಾಗಿ ಜರ್ಮನಿ ತಿಳಿಸಿದೆ. ಇದರ ಜೊತೆಗೆ ರಷ್ಯಾದ ವಿಮಾನಗಳಿಗೆ ತನ್ನ ವೈಮಾನಿಕ ಪ್ರದೇಶ ಮುಚ್ಚುವುದಾಗಿಯೂ ಜರ್ಮನಿ ಹೇಳಿದೆ.

ರಷ್ಯಾದ ಕೆಲ ಬ್ಯಾಂಕುಗಳು ಸ್ವಿಫ್ಟ್ ಜಾಗತಿಕ ಹಣಕಾಸು ಮೆಸೇಜಿಂಗ್ ಸೇವೆ ಬಳಸದಂತೆ ತಡೆಯುವುದಾಗಿ ಅಮೆರಿಕ, ಯುರೋಪ್ ಒಕ್ಕೂಟ ಹಾಗೂ ಬ್ರಿಟನ್‌ಗಳು ತಿಳಿಸಿವೆ. ಈ ವ್ಯವಸ್ಥೆ ಮೂಲಕ ವಿಶ್ವದಾದ್ಯಂತ 11 ಸಾವಿರಕ್ಕೂ ಹೆಚ್ಚು ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ರಷ್ಯಾದ ಕೇಂದ್ರ ಬ್ಯಾಂಕ್ ಮೇಲೆ ನಿರ್ಬಂಧ ಹೇರಲೂ ನಿರ್ಧರಿಸಲಾಗಿದೆ.

ದಿ ಸೊಸೈಟಿ ಫಾರ್ ವರ್ಲ್ಡ್‌ವೈಡ್ ಇಂಟರ್‌ಬ್ಯಾಂಕ್ ಫೈನಾನ್ಷಿಯಲ್ ಟೆಲಿಕಮ್ಯುನಿಕೇಷನ್ (ಸ್ವಿಫ್ಟ್) ಭಾರತಸೇರಿದಂತೆ 200 ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಬೆಲ್ಜಿಯಂನಲ್ಲಿರುವ ಈ ವ್ಯವಸ್ಥೆ ಜಾಗತಿಕ ಹಣಕಾಸು ವ್ಯವಸ್ಥೆ ಸುಗಮವಾಗಿ ಕಾರ್ಯನಿರ್ವಹಿಸಲು ನೆರವಾಗುತ್ತದೆ.

## ಅಧಿವೇಶನ ನಂತರ ರಾಜ್ಯ ಪ್ರವಾಸ

**(1ನೇ ಪುಟದಿಂದ)** ಹೇಳಿದ್ದಾರೆ.


ಕಾಂಗ್ರೆಸ್ ಮಿಥ್ಯಾಚಾರವನ್ನು ಜನರು ನೋಡಿದ್ದಾರೆ. ಹೀಗಾಗಿ ಜನ ಅವರನ್ನು ಬೆಂಬಲಿಸುವುದಿಲ್ಲ. ಜನ ಬಿಜೆಪಿ ಜೊತೆ ಇದ್ದಾರೆ ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಉಕ್ರೇನ್‌ನಲ್ಲಿ ಸಿಲುಕಿರುವ ಕನ್ನಡಿಗರ ಕುರಿತು ಮಾತನಾಡಿದ ಯಡಿಯೂರಪ್ಪ, ಎಲ್ಲರನ್ನೂ ವಾಪಸ್ ಕರೆ ತರುವುದು ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿದೆ. ಯಾರೂ ಗಾಬರಿ ಪಡಬೇಕಿಲ್ಲ ಎಂದಿದ್ದಾರೆ.

ಸಾವಿರಾರು ಜನರು ಈಗಾಗಲೇ ವಿಮಾನಗಳ ಮೂಲಕ ವಾಪಸ್ಸಾಗುತ್ತಿದ್ದಾರೆ. ಯಾರಿಗೂ ತೊಂದರೆಯಾಗಿಲ್ಲ. ಹೀಗಾಗಿ ಗಾಬರಿ ಪಡಬೇಕಿಲ್ಲ. ಎಲ್ಲರನ್ನೂ ವಾಪಸ್ ಕರೆ ತಂದು ಅವರ ಸ್ಥಳಕ್ಕೆ ತಲುಪಿಸುವ ಜವಾಬ್ದಾರಿಯಲ್ಲಿ ಯಶಸ್ವಿಯಾಗುವ ವಿಶ್ವಾಸವಿದೆ ಎಂದು ಯಡಿಯೂರಪ್ಪ ಹೇಳಿದ್ದಾರೆ.

# ಸಂಸ್ಕೃತಿ ಪ್ರಜ್ಞೆಯ ಬೆಳಕು ಭಾರತೀಯರಲ್ಲಿ ಅರಳಬೇಕು

### 'ಪ್ರಬಂಧ ಸಂಚಯ'-'ಉತ್ತುಂಗ' ಪುಸ್ತಕಗಳ ಬಿಡುಗಡೆಯಲ್ಲಿ ಆನಂದ ಋಗ್ವೇದಿ ಅಭಿಮತ




ದಾವಣಗೆರೆ, ಫೆ.28- ಭಾರತೀಯ ಹಿಂದೂ ಸಮಾಜ ಸ್ಥಗಿತವಾಗಿದೆ. ಹಾಗಾಗಿ ಅವಿಚ್ಛಿನವಾದ ಭಾರತೀಯ ನಾಗರಿಕ ಸಂಸ್ಕೃತಿಯ ಪ್ರಜ್ಞೆಯ ಬೆಳಕು ಭಾರತೀಯರಲ್ಲಿ ಅರಳಬೇಕು ಎಂದು ಸಾಹಿತಿ ಮತ್ತು ಜಿಲ್ಲಾಸ್ಪತ್ರೆಯ ಸಹಾಯಕ ಆಡಳಿತಾಧಿಕಾರಿ ಆನಂದ ಋಗ್ವೇದಿ ಅಭಿಪ್ರಾಯಪಟ್ಟರು.

ಸದ್ಯೋಜಾತ ಮಠದಲ್ಲಿ ಸೇವಾ ಭಾರತಿ ಟ್ರಸ್ಟ್ ದಾವಣಗೆರೆ ವತಿಯಿಂದ ಹಮ್ಮಿಕೊಂಡಿದ್ದ ಹೊ.ವೆ. ಶೇಷಾದ್ರಿ ಅವರ ಆಯ್ದ ಲೇಖನಗಳ ಸಂಗ್ರಹ 'ಪ್ರಬಂಧ ಸಂಚಯ' ಹಾಗೂ ಕೃ. ಸೂರ್ಯನಾರಾಯಣ ಕುರಿತಾದ ಕೃತಿ 'ಉತ್ತುಂಗ' ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜನ ಮಗ ರಾಜನಾಗಬೇಕು, ಬ್ರಾಹ್ಮಣನ ಮಗ ಬ್ರಾಹ್ಮಣನಾಗಬೇಕು, ವೈಶ್ಯನ ಮಗ ವೈಶ್ಯನಾಗಬೇಕೆಂಬ ಸ್ಥಗಿತಗೊಳಿಸಲಾದ ಸಮಾಜದಲ್ಲಿ ನಾವಿದ್ದೇವೆ. ಇದನ್ನು ಸರಿಪಡಿಸುವಂತಹ ಕೀಲಿ ಕೈ ನಮ್ಮಗಳ ಕೈಯ್ಯಲಿದ್ದು, ಇದಕ್ಕೆ ಭಾರತೀಯ ಸಂಸ್ಕೃತಿಯೇ ದಿವ್ಯೌಷಧಿ. ನಾವು ಭಾರತೀಯರು, ನಾವೆಲ್ಲಾ ಹಿಂದೂ ನಾವೆಲ್ಲಾ ಒಂದೇ ಎಂಬ ಸಾಮಾಜಿಕ ಪ್ರಜ್ಞೆ ಮತ್ತು ಬದುಕು ಹಸನಾಗಿಸುವ ಅರಿವಿನ ಸಂದೇಶವು ಹಿರಿಯ ಚಿಂತಕರು ಕೊಡುಗೆಯಾಗಿ ನೀಡಿರುವ ಅಪಾರವಾದ ಸಾಹಿತ್ಯದಲ್ಲಿ ಅಡಕವಾಗಿವೆ ಎಂದು ತಿಳಿಸಿದರು.

ನಾವು ಭಾರತೀಯರು ಎಂದು ಹೆಮ್ಮೆಪಟ್ಟುಕೊಳ್ಳುವಂತಹ 5 ಸಾವಿರ ವರ್ಷಗಳ ಅವಿಚ್ಛಿನ್ನವಾದ ನಿರಂತರವಾದ ಸಾಮರಸ್ಯವನ್ನೊಳಗೊಂಡ ನಾಗರಿಕ ದೇಶದ ಸಂಸ್ಕೃತಿ ನಮ್ಮದು. ಯಾವುದೇ ಸ್ಥಗಿತತೆ ಇಲ್ಲದೇ ಅರಿತು ಬಾಳಿದ ಜೀವಂತ ಸಂಸ್ಕೃತಿ ಭಾರತೀಯ ಸಂಸ್ಕೃತಿ. ಈ ಸಂಸ್ಕೃತಿಯನ್ನು ನಿರ್ಮಲವಾಗಿ, ಪರಿಶುದ್ಧತೆಯಿಂದ ಕಾಪಾಡುವುದು ಭಾರತೀಯರಾದ ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ನದಿಯಂತೆ ನಿರ್ಮಲವಾಗಿ ಹರಿಯುವ ಈ ಸಂಸ್ಕೃತಿಗೆ ನದಿಗಳಲ್ಲಿ ಇತ್ತೀಚಿಗೆ ಹರಿಯುವ ಕಲ್ಮಶದಂತೆ ಸಾಕಷ್ಟು ಅನಾಗರಿಕತೆ ಮೈದಾಳಿದೆ. ಮತಾಂತರ ದೊಡ್ಡ ಪಿಡುಗಾಗಿದೆ. ಅಸ್ಪೃಶ್ಯತೆ ಪಾಲನೆ ಹೆಚ್ಚಾಗಿದೆ. ಸಹಬಾಳ್ವೆ, ಭಾರತೀಯರೆಲ್ಲಾ ಹಿಂದೂಗಳೇ ಎಂಬ ಸಾಮಾಜಿಕ ತಿಳುವಳಿಕೆಯನ್ನು ಹಿಂದೆಯೇ ಋಷಿ, ಮುನಿಗಳು ಭಾರತೀಯರಿಗೆ ಮನವರಿಕೆ ಮಾಡಿದ್ದಾರೆ. ಹೊ.ವೆ. ಶೇಷಾದ್ರಿ ಹಾಗೂ ಕೃ. ಸೂರ್ಯನಾರಾಯಣ ಅವರಂತಹ ಹಿರಿಯ ಚೇತನಗಳು ಸಹ ಹೇಗೆ ಬಾಳಬೇಕೆಂಬ ಬದುಕಿನ ದಾರಿಯನ್ನು ತಮ್ಮ ಸಾಹಿತ್ಯಗಳ ಮೂಲಕ ಕಟ್ಟಿಕೊಟ್ಟಿದ್ದಾರೆ ಎಂದರು.

ಉಡುಪಿಯ ಮಣಿಪಾಲ್ ಇನ್ಸ್ ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ನ ಅಸೋಸಿಯೇಟ್ ಪ್ರೊಫೆಸರ್ ಡಾ. ನಂದನ್ ಪ್ರಭು ಕೃತಿ ಪರಿಚಯ ಮಾಡಿದರು.

ಸಂಸದ ಡಾ. ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಸೇರಿದಂತೆ, ಅತಿಥಿ ಗಣ್ಯರು ಪುಸ್ತಕಗಳ ಲೋಕಾರ್ಪಣೆಗೊಳಿಸಿದರು.

ಸೇವಾ ಭಾರತಿ ಟ್ರಸ್ಟ್ ಅಧ್ಯಕ್ಷ ಉಮಾಪತಿ ಅಧ್ಯಕ್ಷತೆ ವಹಿಸಿದ್ದರು. ಪ್ರಶಾಂತ್ ಕೋಲ್ಕುಂಟೆ ಸ್ವಾಗತಿಸಿದರು. ಡಾ. ಕಾರ್ತಿಕ್ ನಿರೂಪಿಸಿದರು. ಅಮರೇಶ್ ವಂದಿಸಿದರು.

# ಉದ್ಯೋಗ, ಬಜೆಟ್ ನೆರವಿಗೆ ಪ್ರತಿಭಟನೆ



ದಾವಣಗೆರೆ, ಫೆ. 27 - ವಾಕ್ ಮತ್ತು ಶ್ರವಣ ನ್ಯೂನತೆಯುಳ್ಳವರಿಗೆ ಉದ್ಯೋಗ ಕಲ್ಪಿಸುವಂತೆ ಮತ್ತು ರಾಜ್ಯ ಬಜೆಟ್‌ನಲ್ಲಿ ನೆರವು ಕಲ್ಪಿಸುವಂತೆ ಒತ್ತಾಯಿಸಿ ಜಿಲ್ಲಾ ಕಿವುಡರ ಸಂಘದ ವತಿಯಿಂದ ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೂಲಭೂತ ಹಕ್ಕು ಹಾಗೂ ಸೌಕರ್ಯ ಕಲ್ಪಿಸುವಂತೆ ಎಷ್ಟು ಬಾರಿ ಮನವಿ ಸಲ್ಲಿಸಿದರೂ ಕಡೆಗಣಿಸುತ್ತಾ ಬರಲಾಗಿದೆ. ಈ ಬಾರಿಯಾದರೂ ಸಮಸ್ಯೆ ಬಗೆಹರಿಸಿ, ಇಲ್ಲವಾದರೆ ದಯಾಮರಣಕ್ಕೆ ಅವಕಾಶ ಕೊಡಿ ಎಂದು ಪ್ರತಿಭಟನೆಯಲ್ಲಿ ತೊಡಗಿದವರು ಹತಾಶೆ ಹೊರ ಹಾಕಿದ್ದಾರೆ.

ವಾಕ್ ಮತ್ತು ಶ್ರವಣ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿಲ್ಲ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ 97 ಜನರಿಗೆ ಉದ್ಯೋಗದ ಭರವಸೆ ನೀಡಲಾಗಿತ್ತಾದರೂ, ಕೇವಲ ನಾಲ್ವರಿಗೆ ಉದ್ಯೋಗ ದೊರೆತಿದೆ ಎಂದು ಪ್ರತಿಭಟನಾಕಾರರು ದೂರಿದ್ದಾರೆ.

ಹೊರಗುತ್ತಿಗೆ ಕೆಲಸ ನೀಡುವ ಸಂದರ್ಭದಲ್ಲಿ ವಾಕ್ ಮತ್ತು ಶ್ರವಣ ನ್ಯೂನತೆ ಉಳ್ಳವರಿಗೆ ಪ್ರತಿ ಇಲಾಖೆಯಲ್ಲಿ ಒಂದು ಕೆಲಸ ನೀಡಿದರೂ ನಮಗೆಲ್ಲ ಉದ್ಯೋಗ ಸಿಗುತ್ತದೆ. ಸ್ವಯಂ ಉದ್ಯೋಗಕ್ಕೂ ಅವಕಾಶ ಕಲ್ಪಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ.

ಸಿ.ಎಂ.ಸಿ. ವತಿಯಿಂದ ಸೌಲಭ್ಯ ವಿತರಿಸುವಾಗ ಗುಣಮಟ್ಟದ ಶ್ರವಣ ಸಾಧನ ನೀಡಬೇಕು. ವಾಕ್ ಮತ್ತು ಶ್ರವಣ ನ್ಯೂನತೆ ಉಳ್ಳವರಿಗೆ ವಾಹನ ಚಾಲನೆ ಅನುಮತಿ ನೀಡಬೇಕು ಎಂದವರು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಕಿವುಡರ ಸಂಘದ ಅಧ್ಯಕ್ಷ ಎಸ್. ಆಸಿಫ್, ಪ್ರಧಾನ ಕಾರ್ಯದರ್ಶಿ ಬಿ.ಕೆ.ಪಿ. ರಾಜಶೇಖರ್, ಬಿ.ಟಿ. ಗಿರೀಶ್, ಖಜಾಂಚಿ ಎ. ನಾಗರಾಜ, ಸದಸ್ಯರಾದ ಬಿ.ವಿ. ಮಂಜುನಾಥ, ಆರ್. ಸಲೀಂ ಸಾಬ್, ಜೆ. ಇರ್ಫಾನ್, ಪೂಜಾ, ಎಂ.ಕೆ. ಶೃತಿ, ಬಿ.ಟಿ. ವಿಶ್ವನಾಥ ನಿಂಬಾಳ್ಕರ್ ಮತ್ತಿತರರು ಉಪಸ್ಥಿತರಿದ್ದರು.

## ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಪೂಜೆ

ದಾವಣಗೆರೆ, ಫೆ.27- ಎಸ್.ಕೆ.ಪಿ. ರಸ್ತೆಯ ಶ್ರೀ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ 1 ರಂದು ಶಿವರಾತ್ರಿ ಪ್ರಯುಕ್ತ ಜಾಗರಣೆ ನಡೆಯುವುದು.


**WANTED**
BILLING/STORE SALES
BOLAS THE FACTORY OUTLET
DRY FRUIT SHOP
FOR LADIES ONLY
QUALIFICATION : ANY DEGREE WITH COMPUTER KNOWLEDGE
99007 08999 / 94484 54709

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
ಅಮರಾವತಿ ಹಾಲಪ್ಪ
98454 84076

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000
97392 15000

**ಮನೆ ಬಾಡಿಗೆಗೆ ಇದೆ**
ವಿನಾಯಕ ನಗರ 'ಎ' ಬ್ಲಾಕ್, ಪಿ.ಬಿ. ರಸ್ತೆ ಪೂಜಾ ಹೋಟೆಲ್ ಎದುರು, ರಿಂಗ್ ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್ ಹತ್ತಿರ 1ನೇ ಮಹಡಿಯಲ್ಲಿ 2 ಬೆಡ್ ರೂಂ, ಮುನ್ಸಿಪಲ್ & ಬೋರ್ ನೀರಿನ ಸೌಕರ್ಯ ಇರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
98451 20295, 90353 63078

**ANARGYA ASSOCIATES**
BUILDING Planings
3D Desgins and Material Contractor, competative Price.
95351 11990

**15 ದಿನಗಳಲ್ಲಿ ಪರಿಹಾರ**
ಬಿ.ಪಿ., ಶುಗರ್, ಥೈರಾಯಿಡ್, ಗ್ಯಾಸ್ಟ್ರಿಕ್, ಮಂಡಿ / ಬೆನ್ನು / ಕಾಲು ನೋವು ವೆರಿಕೋಸ್ ವೇನ್ಸ್, ತೂಕದಲ್ಲಿ ಇಳಿಕೆ, ನಿದ್ರಾ ಹೀನತೆ, ಸ್ಟ್ರೋಕ್, ಕಾಲುಬಾವು ಯಾವುದೇ ಸಮಸ್ಯೆಗಳಿಗೆ ನೇರ ಪರಿಹಾರ (T&C) ಉಚಿತ ಥೆರಪಿಗಾಗಿ
86602 35013


**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ Delivery Boy ಆಗಿ ಕೆಲಸ ಮಾಡಲು ಬೈಕ್ ಇರುವಂತಹ ಹುಡುಗರು ಬೇಕಾಗಿದ್ದಾರೆ Age: 18 ರಿಂದ 28 ವರ್ಷ
9738523711

**SPOKEN ENGLISH JUST 120 HOURS CAN CHANGE YOUR LIFE**
@VETA Experts in spoken English
98450 40493, 93439 44659

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
SSLC, PUC, Technical & Non Technical, Pharmacy & BHMS (Government & Private College)
ಕೆಲವೇ ಸೀಟುಗಳು ಲಭ್ಯ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 82173 02649


**ಪುಣ್ಯಸ್ಮರಣೆ**



**ದಿ. ಕಣ್ಣಾಳ ಕೆಂಚಪ್ಪನವರು**
ಕುಂಬಳೂರು
ನಿಧನ : 28.2.2002
ನೀವು ನಮ್ಮನ್ನಗಲಿ ಇಂದಿಗೆ 20 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
**ಕಣ್ಣಾಳ ವಂಶಸ್ಥರು ಮತ್ತು ಬಂಧುಗಳು.**

## ನಗರದ ವಿವಿಧೆಡೆಯಲ್ಲಿ ಕಳ್ಳತನ

ದಾವಣಗೆರೆ, ಫೆ.27- ಕಿರಾಣಿ ಅಂಗಡಿಗೆ ಕನ್ನ ಹಾಕಿರುವ ಕಳ್ಳರು 3 ಲಕ್ಷ ನಗದು ಹಾಗೂ ಮಸಾಲೆ ಸಾಮಾನುಗಳನ್ನು ದೋಚಿರುವ ಘಟನೆ ಇಲ್ಲಿನ ಬಸವನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಆರ್ ಮಾರುಕಟ್ಟೆಯ ಡಬಲ್ ರಸ್ತೆಯಲ್ಲಿರುವ ತರಳಬಾಳು ಪ್ರಾವಿಜನ್ ಸ್ಟೋರ್‌ನಲ್ಲಿ ನಡೆದಿದೆ.

ಅಂಗಡಿ ಮಾಲೀಕ ಎಂ. ಲಕ್ಷ್ಮಣ್ ಅವರು ಎಂದಿನಂತೆ ಇದೇ 25ರಂದು ಅಂಗಡಿ ಸಾಮಾನು ತರಲೆಂದು ಸಾಲ ಪಡೆದಿದ್ದ 3 ಲಕ್ಷ ರೂ. ಗಳನ್ನು ಡ್ರಾದಲ್ಲಿಟ್ಟು ರಾತ್ರಿ ಅಂಗಡಿಗೆ ಬೀಗ ಹಾಕಿಕೊಂಡು ಹೋದ ಸಂದರ್ಭದಲ್ಲಿ ಈ ಘಟನೆ ಜರುಗಿದೆ.

**ಡಾಬಾದಲ್ಲಿ ಕಳ್ಳತನ :** ಡಾಬಾವೊಂದಕ್ಕೆ ಕನ್ನ ಹಾಕಿರುವ ಕಳ್ಳರು 70 ಸಾವಿರ ರೂ. ಬೆಲೆ ಬಾಳುವ ಸಾಮಗ್ರಿಗಳನ್ನು ದೋಚಿರುವ ಘಟನೆ ಬಾಡಾ ಕ್ರಾಸ್ ಬಳಿ ನಡೆದಿದೆ. ಕೋವಿಡ್ ಸಂದರ್ಭದಲ್ಲಿ ವ್ಯಾಪಾರವಿಲ್ಲದೇ ಮುಚ್ಚಲಾಗಿದ್ದ ಈ ಡಾಬಾದಲ್ಲಿದ್ದ 4,500 ರೂ., ಮೌಲ್ಯದ ನೀರಿನ ಮೋಟರ್, 10 ಸಾವಿರ ಮೌಲ್ಯದ ಐದು ಎಣ್ಣೆ ಬಾಂಡ್ಲಿ, 6,500 ಮೌಲ್ಯದ ಕಬ್ಬಿಣದ ರ್‍ಯಾಕ್, 5 ಸಾವಿರ ಮೌಲ್ಯದ ಸ್ಟೀಲ್ ಪಾತ್ರೆಗಳು, 2 ಸಾವಿರ ಮೌಲ್ಯದ ನೂರು ಸ್ಟೀಲ್ ಪ್ಲೇಟ್ ಸೇರಿದಂತೆ ಒಟ್ಟು 70 ಸಾವಿರ ಮೌಲ್ಯದ ಸಾಮಗ್ರಿಗಳನ್ನು ಕಳ್ಳರು ದೋಚಿದ್ದಾರೆ.

## ರಸ್ತೆ ಅಪಘಾತ : ಕೆಲಸಗಾರನ ಸಾವು

ದಾವಣಗೆರೆ, ಫೆ.27- ವೆಲ್ಡಿಂಗ್ ಕೆಲಸಕ್ಕಾಗಿ ಹೆಬ್ಬಾಳ್ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಕೂಲಿ ಕಾರ್ಮಿಕನೋರ್ವ ಮೃತಪಟ್ಟ ಘಟನೆ ಇಲ್ಲಿನ ದಕ್ಷಿಣ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯ ಬೆಂಗಳೂರಿನಿಂದ ಹರಿಹರ ಕಡೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿ-48ರಲ್ಲಿ ನಡೆದಿದೆ.

ತರಳಬಾಳು ನಗರದ 6ನೇ ಕಲ್ಲು ವಾಸಿ ಗೋಪಾಲ್ (54) ಮೃತ ದುರ್ದೈವಿ. ಫೆ.27ರಂದು ವೆಲ್ಡಿಂಗ್ ಕೆಲಸಕ್ಕಾಗಿ ಹೆಬ್ಬಾಳು ಗ್ರಾಮಕ್ಕೆ ಬೈಕಿನಲ್ಲಿ ತೆರಳುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಈತನನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ.

## ಶಾಲೆಗಳನ್ನು ಸುಂದರಗೊಳಿಸಿದ ಪ್ರತಿಷ್ಠಾನ



**(1ನೇ ಪುಟದಿಂದ)** ಅಭಿಯಾನದ ಮುಖ್ಯ ಉದ್ದೇಶವಾಗಿ ರುತ್ತದೆ ಎಂದು ತಂಡದ ಮುಖ್ಯಸ್ಥ ಪವನ್ ತಿಳಿಸಿದರು.

ಶಾಲೆಗಳಿಗೆ ಬಣ್ಣ ಬಳಿದ ನಂತರ ಇ.ಬೇವಿನಹಳ್ಳಿ ಮತ್ತು ಕೆ.ಕಲ್ಲಹಳ್ಳಿಯ ಶಾಲೆಯ ಶಿಕ್ಷಕರು ಮತ್ತು ಎಸ್‌ಡಿಎಮ್‌ಸಿ ಹಾಗೂ ಗ್ರಾಮ ಪಂಚಾಯ್ತಿ ಸದಸ್ಯರು ಕನ್ನಡ ಮನಸುಗಳ ತಂಡವರಿಗೆ ಭಾನುವಾರ ಸನ್ಮಾನ ಕಾರ್ಯಕ್ರಮ ಏರ್ಪಡಿಸಿದ್ದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ.ಸದಸ್ಯರಾದ ಕಮ್ಮತ್ ನೀಲಮ್ಮ, ಡಂಬಳ್ ಬಸವರಾಜ್, ಎಸ್‌ಡಿಎಮ್‌ಸಿ ಅಧ್ಯಕ್ಷ ಗುತ್ತೂರು ಹಾಲೇಶ್, ಮೌನೇಶ್ ಕೆ.ಕಲ್ಲಹಳ್ಳಿ ಶಾಲೆ ಹಳೆ ವಿದ್ಯಾರ್ಥಿಗಳಾದ ಪುಟ್ಟನಗೌಡ ಪಾಟೀಲ್, ಗೋಣೆಪ್ಪ, ನಂದೀಶ್ ಆಚಾರ್, ಮಂಜುನಾಥ್, ಮತ್ತು ಇ.ಬೇವಿನಹಳ್ಳಿ ಗ್ರಾಮದ ಬೇಲೂರು ಗುರುಸಿದ್ದಪ್ಪ, ಪಾಟೀಲ್ ಸುರೇಶ್, ಹಳೆ ವಿದ್ಯಾರ್ಥಿಗಳಾದ ಮನು, ಬಸವರಾಜ್, ಅಂಗಡಿ ಮಲ್ಲಿಕಾರ್ಜುನ, ಕಮ್ಮತ್ ಮಲ್ಲಿಕಾರ್ಜುನ, ಬೇಲೂರು ಸಿದ್ದನಗೌಡ, ಹೊಳಲು ಮಂಜುನಾಥ್, ಡಂಬಳ್ ಸುರೇಶ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮೇಕೆದಾಟು ಪಾದಯಾತ್ರೆ ಪುನರಾರಂಭ

**(1ನೇ ಪುಟದಿಂದ)** ಕ್ರಮಿಸಿ ಬಿಡದಿಗೆ ತಲುಪಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, ಯಾವುದೇ ಕಾನೂನು ತೊಡಕಿಲ್ಲದಿದ್ದರೂ ಯೋಜನೆಯನ್ನು ಜಾರಿಗೆ ತರಲಾಗುತ್ತಿಲ್ಲ. ಕೇಂದ್ರ ಸರ್ಕಾರ ಯೋಜನೆಗೆ ಪರಿಸರ ಅನುಮತಿ ನೀಡಬೇಕು. ರಾಜ್ಯ ಸರ್ಕಾರ ಒತ್ತಡ ಹಾಕಿ ಅನುಮತಿ ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಉರುಳಿದ್ದರೂ ಪರಿಸರ ಹಾಗೂ ಅರಣ್ಯ ಅನುಮತಿ ಪಡೆಯಲು ಸಾಧ್ಯವಾಗಿಲ್ಲ. ತಮಿಳುನಾಡು ಯೋಜನೆಯನ್ನು ರಾಜಕೀಯವಾಗಿ ವಿರೋಧಿಸುತ್ತಿದೆಯೇ ಹೊರತು, ಯಾವುದೇ ನ್ಯಾಯಾಲಯದ ಆದೇಶದಿಂದ ಅಲ್ಲ. ಯೋಜನೆ ಆರಂಭಿಸದೇ ಇದ್ದರೆ ಅದು ಜನರಿಗೆ ಮಾಡುವ ದ್ರೋಹ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸುರ್ಜೇವಾಲ, ರಾಜ್ಯ ಬಿಜೆಪಿ ಸರ್ಕಾರ ಜನರ ನೀರಿನ ಹಕ್ಕಿಗೆ ಅಡ್ಡಿಯಾಗಿದೆ. ಪಾದಯಾತ್ರೆಯ ಮೂಲಕ ನೀರಿನ ಹಕ್ಕಿಗಾಗಿ ಜನರ ಕೂಗು ಬಲವಾಗಿದೆ. ಜನರ ಹೋರಾಟಕ್ಕೆ ಜಯ ಸಿಗಲಿದೆ ಎಂದಿದ್ದಾರೆ.

ಶಿವಕುಮಾರ್ ಮಾತನಾಡಿ, ಇದು ಬೆಂಗಳೂರು ಹಾಗೂ ಸುತ್ತಲಿನ ಜನರ ಕುಡಿಯುವ ನೀರು ಹಾಗೂ ಈ ಪ್ರದೇಶದ ರೈತರಿಗಾಗಿ ನಡೆಸುತ್ತಿರುವ ಹೋರಾಟ ಎಂದಿದ್ದಾರೆ.

## ಮಾದಿಗರಿಗೆ ತಕ್ಕ ಮೀಸಲು ಸಿಗುತ್ತಿಲ್ಲ

**(1ನೇ ಪುಟದಿಂದ)** ಹಾಕಲಾಗುವುದು. ಮುಂದಿನ ಚುನಾವಣೆಗಳಲ್ಲಿ ಬಿಜೆಪಿ-ಕಾಂಗ್ರೆಸ್ ಎರಡನ್ನೂ ತಿರಸ್ಕರಿಸೋಣ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ.ಎಂ. ದೇವರಾಜ ಮಾತನಾಡಿ, ಮೀಸಲು ವರ್ಗೀಕರಣ ವಿಚಾರದಲ್ಲಿ ಮಾದಿಗ ಸಮಾಜದ ಹೋರಾಟದ ಕಿಚ್ಚು ಹೆಚ್ಚಬೇಕಿದೆ ಎಂದರು.

ವಕೀಲ ಅನೀಸ್‌ಪಾಷಾ ಮಾತನಾಡಿ, ಮೇಲ್ವರ್ಗದವರು ಕೇಳದಿದ್ದರೂ ಶೇ.10ರ ಮೀಸಲು ನೀಡುವ ಸರ್ಕಾರ , ಮಾದಿಗ ಸಮಾಜದ ಹಕ್ಕೊತ್ತಾಯಕ್ಕೆ ಸ್ಪಂದಿಸಿಲ್ಲ. ಇದರ ವಿರುದ್ಧ ಒಗ್ಗಟ್ಟಿನ ಹೋರಾಟ ಬೇಕು ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಮಾದಿಗ ದಂಡೋರ ಅಧ್ಯಕ್ಷ ಬಿ.ನರಸಪ್ಪ ದಂಡೋರ, ಹಿರಿಯ ಉಪಾಧ್ಯಕ್ಷ ಎಂ.ಸಿ.ಶ್ರೀನಿವಾಸ, ಸಂಘಟನಾ ಕಾರ್ಯದರ್ಶಿ ಎಚ್. ರವಿಚಂದ್ರ, ಬಿ.ತಿಪ್ಪೇಸ್ವಾಮಿ, ಪಾಲಿಕೆ ಸದಸ್ಯ ಎಲ್.ಟಿ. ಗೋಣೆಪ್ಪ, ಎಸ್. ನಿಂಗಪ್ಪ, ಹೆಗ್ಗೆರೆ ರಂಗಪ್ಪ, ಮಾನಪ್ಪ, ಶಿವಮ್ಮ, ತಮ್ಮಣ್ಣ ಸೇರಿದಂತೆ ಇತರರು ಇದ್ದರು.

**ಹೆಚ್.ವಿಷ್ಣುಪಂತ್ ನಿಧನ**



ದಾವಣಗೆರೆ ಎಂ.ಸಿ.ಸಿ 'ಬಿ' ಬ್ಲಾಕ್ ಬಾಪೂಜಿ ಹೈಸ್ಕೂಲ್ ಹಿಂಭಾಗದ ವಾಸಿ ಕಾಂಗ್ರೆಸ್ ಮುಖಂಡರಾದ ಹೆಚ್.ಡಿ. ಹನುಮಂತಪ್ಪ ಹಾಗೂ ನಗರ ಪಾಲಿಕೆ ಮಾಜಿ ಸದಸ್ಯೆ ಬಸಮ್ಮ ದಂಪತಿಯ ಪುತ್ರ ಹಾಗೂ ಜನತಾ ಬಜಾರ್ ನಿರ್ದೇಶಕರಾದ ಹೆಚ್.ವಿಷ್ಣುಪಂತ್ (48) ಅವರು ದಿನಾಂಕ 27.2.2022 ರ ಭಾನುವಾರ ನಿಧನರಾದರು. ಪತ್ನಿ, ಮೂವರು ಪುತ್ರಿಯರು ಹಾಗೂ ದೂಡಾ ಎಇಇ ಶ್ರೀಕರ್ ಸೇರಿ ಇಬ್ಬರು ಹಿರಿಯ ಸಹೋದರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಆವರಗೊಳ್ಳದ ಮೃತರ ಜಮೀನಿನಲ್ಲಿ 27.2.2022 ರ ಭಾನುವಾರ ಸಂಜೆ ನೆರವೇರಿಸಲಾಯಿತು.

## 4ರಂದು ಶಿಕ್ಷಕರಿಂದ ವಿಧಾನಸೌಧ ಚಲೋ

ದಾವಣಗೆರೆ, ಫೆ.27- ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ನಿವೃತ್ತ ಶಿಕ್ಷಕರಿಗೆ ಹಳೆಯ ನಿಶ್ಚಿತ ಪಿಂಚಣಿ ಸೌಲಭ್ಯ, ನೂತನ ಪಿಂಚಣಿ ಯೋಜನೆ ಜಾರಿ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ಮಾ.4ರ ಶುಕ್ರವಾರ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ವಿಧಾನಸೌಧ ಚಲೋ ಬೃಹತ್ ಹೋರಾಟ ಹಮ್ಮಿಕೊಂಡಿರುವುದಾಗಿ ಸಂಘದ ಜಿಲ್ಲಾ ಅಧ್ಯಕ್ಷ ಎಸ್.ಎಂ. ಮಡಿವಾಳರ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2006, ಏಪ್ರಿಲ್ 1ಕ್ಕೂ ಮೊದಲು ನೇಮಕವಾಗಿ ನಂತರ ಅನುದಾನಕ್ಕೊಳಪಟ್ಟ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ನಿವೃತ್ತರಾಗಿರುವ ನೌಕರರ ಸೇವಾ ಅವಧಿಯನ್ನು ಕಾಲ್ಪನಿಕವಾಗಿ ಪರಿಗಣಿಸಿ ಹಳೆಯ ನಿಶ್ಚಿತ ಪಿಂಚಣಿ ಸೌಲಭ್ಯ ನೀಡಬೇಕು.

ನೂತನ ಪಿಂಚಣಿ ಯೋಜನೆಯನ್ನು ಸರ್ಕಾರಿ ನೌಕರರಿಗೆ ನೀಡುವಂತೆ ಯಥಾವತ್ತಾಗಿ ನೀಡಬೇಕು. ಅದಕ್ಕಾಗಿ ಶೇ.14ರಷ್ಟು ಹಣವನ್ನು ಆಡಳಿತ ಮಂಡಳಿಗೆ ನೀಡಬೇಕು. ಅನುದಾನಿತ ಶಾಲಾ - ಕಾಲೇಜು ನೌಕರರಿಗೂ ಆರೋಗ್ಯ ಸಿರಿ ಯೋಜನೆ ಜಾರಿಗೆ ತರಬೇಕು. ಖಾಲಿ ಹುದ್ದೆಗಳನ್ನು ತುಂಬಲು ವಿಧಿಸಿರುವ ನಿಯಮಗಳನ್ನು ಸಡಿಲಗೊಳಿಸಬೇಕು. ಅನುದಾನಿತ ಶಾಲಾ ಮಕ್ಕಳಿಗೂ ಸರ್ಕಾರಿ ಶಾಲಾ ಮಕ್ಕಳಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ನೀಡಬೇಕು. ಶಾಲಾ ಮಾನ್ಯತೆ ನವೀಕರಣ ಸರಳೀಕರಣಗೊಳಿಸಬೇಕು. ಡಿ ಗ್ರೂಪ್ ನೌಕರರನ್ನು ಖಾಯಂಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳೊಂದಿಗೆ ಹೋರಾಟಕ್ಕೆ ಮುಂದಾಗಿರುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಸಂಚಾಲಕ ವಿರೂಪಾಕ್ಷಪ್ಪ ಮತ್ತೋಡಿ, ಅಜಯ್ ಬಿ., ಜಿ.ಸಿ. ಧನಂಜಯಪ್ಪ, ಎಸ್.ಜೆ. ಲೋಕೇಶ್, ಕೆ.ಸಿ. ಶ್ರೀನಿವಾಸ ಮೂರ್ತಿ, ಎಂ.ವಿ. ಮಹೇಶ್ವರಪ್ಪ, ಹೆಚ್.ಷಣ್ಮುಖಪ್ಪ ಇತರರು ಉಪಸ್ಥಿತರಿದ್ದರು.

# ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ



**ಹರಪನಹಳ್ಳಿ**

ಹರಪನಹಳ್ಳಿ, ಫೆ. 27- ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ತಾಲ್ಲೂಕು ಕೆಪಿಆರ್‌ಎಸ್ ರೈತ ಸಂಘದ ಅಧ್ಯಕ್ಷ ಹುಲಿಕಟ್ಟೆ ಕೆ. ರಾಜಪ್ಪ ಮಾತನಾಡಿ, ಬಂಡವಾಳ ಶಾಹಿಗಳಿಗೆ ನೆರವಾಗುವ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪ್ರಯತ್ನಿಸುತ್ತಿದ್ದು, ಪರಿಣಾಮ ವಿವಿಧ ರೈತ ವಿರೋಧಿ ನೀತಿಗಳಾದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ಕಾಯ್ದೆ 2020, ಜಾನುವಾರ ಹತ್ಯೆ ನಿಷೇಧ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ, ತಾಲ್ಲೂಕಿನಲ್ಲಿ ಬಗರ್ ಹುಕ್ಕುಂ ಸಾಗುವಳಿದಾರ ರೈತರಿಗೆ ಹಕ್ಕು ಪತ್ರ ನೀಡುವುದು, ನರೇಗಾದಲ್ಲಿ ಕೂಲಿ ಹಣ ಹೆಚ್ಚಿಸಿ ಕೆಲಸ ಕೊಡುವುದು ಸೇರಿದಂತೆ ಕಾಯ್ದೆ ಜಾರಿಗೊಳಿಸಲು ಮುಂದಾಗಿರುವುದನ್ನು ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಸಂಘಟನೆಯ ಹೊಸಹಳ್ಳಿ ಮಲ್ಲೇಶ್ ಮಾತನಾಡಿ, ರಾಜ್ಯದಲ್ಲಿ ಅತೀವೃಷ್ಟಿ ಪ್ರವಾಹ ಮತ್ತು ಕೋವಿಡ್ ಸಂಕಷ್ಟದಿಂದ ಜನತೆಗೆ ಸಮರ್ಪಕ ಮೂಲ ಸೌಕರ್ಯ ಒದಗಿಸಿ, ರಕ್ಷಣೆಗೆ ಮುಂದಾಗುವ ಕ್ರಮ ಕೈಗೊಳ್ಳುತ್ತಿಲ್ಲ. ರೈತರು ಬೆಳೆದ ರಾಗಿ, ಮೆಕ್ಕೆಜೋಳ, ಜೋಳ ಸೇರಿದಂತೆ ಇತರೆ ಬೆಳೆಗಳಿಗೆ ಬೆಂಬಲ ಬೆಲೆಯೊಂದಿಗೆ ಸರ್ಕಾರ ಖರೀದಿ ಕೇಂದ್ರವನ್ನು ಕೂಡಲೇ ತೆರೆಯಬೇಕು.

ಕೋವಿಡ್ ಮೃತರಿಗೆ ಪರಿಹಾರ ನೀಡಬೇಕು. ಹಲವಾರು ವರ್ಷಗಳಿಂದ ತಾಲ್ಲೂಕಿನಲ್ಲಿ ಭೂ ಸಾಗುವಳಿ ಮಾಡುತ್ತಾ ಬಂದಿರುವ ಫಾರಂ 57ನ್ನು ಹಾಕಿರುವ ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ತಾಲ್ಲೂಕು ಕೆಪಿಆರ್‌ಎಸ್ ಕಾರ್ಯದರ್ಶಿ ಎಸ್. ನಾಗರಾಜ, ಟಿ.ವಿ. ರೇಣುಕಮ್ಮ ಎ. ಭರಮಪ್ಪ, ಸುಭಾನ್ ನಾಯ್ಕ, ಬಿ. ಯಮುನಪ್ಪ, ಹುಲಿಕಟ್ಟೆ ರಹಮತ್, ಇದ್ಲಿ ರಾಮಪ್ಪ ಉಪಸ್ಥಿತರಿದ್ದರು.

# ಸಂಶೋಧನೆಗಳು ದೇಶದ ಉನ್ನತಿಗೆ ಪೂರಕವಾಗಿರಲಿ

## ದಾವಿವಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಪ್ರೊ. ಶೀಲಾ ರಾಯ್ ಅಭಿಮತ



ದಾವಣಗೆರೆ, ಫೆ. 27- ದೇಶಿ ಸಂಸ್ಕೃತಿ, ಸಂಪ್ರದಾಯಗಳನ್ನು ಒಳಗೊಂಡ ಸಂಶೋಧನೆಗಳು ಪ್ರಸ್ತುತತೆಯನ್ನು ಪ್ರತಿನಿಧಿಸಿ, ಸಮಾಜದ ಪರಿವ ರ್ತನೆಯ ಮೂಲಕ ದೇಶವನ್ನು ಉನ್ನತಿಗೆ ಒಯ್ಯು ವಂತಾಗಬೇಕು ಎಂದು ನವದೆಹಲಿಯ ರಾಷ್ಟ್ರೀಯ ಸಮಾಜ ವಿಜ್ಞಾನ ಪರಿಷತ್ ಪ್ರಧಾನ ಕಾರ್ಯದರ್ಶಿ ಪ್ರೊ.ಶೀಲಾ ರಾಯ್ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯ, ನವದೆಹಲಿಯ ಐಸಿಎಸ್‌ಎಸ್‌ಆರ್, ರಾಷ್ಟ್ರೀಯ ಸಮಾಜ ವಿಜ್ಞಾನ ಪರಿಷತ್ ವತಿಯಿಂದ ಬುಧವಾರ ಆರಂಭವಾದ ಭಾರತದ ಸಮಾಜ ವಿಜ್ಞಾನ ಅಧ್ಯಯನದಲ್ಲಿ ದೇಶೀಯತೆ ಕುರಿತ ಎರಡು ದಿನಗಳ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದ ಶಿಕ್ಷಣದಲ್ಲಿ ಹಿಂದೆ ಋಷಿ ಸಂಸ್ಕೃತಿ, ಆರಾಧನೆ ಸಂಸ್ಕೃತಿ, ಅನುಭವ ಸಂಸ್ಕೃತಿಗಳು ಇದ್ದವು. ಅವು ವಿದ್ಯಾರ್ಥಿಯ ಆಸಕ್ತಿಯ ಕಲಿಕೆಗೆ ಪ್ರೋತ್ಸಾಹ ನೀಡುತ್ತಿದ್ದವು. ಜನಾಂಗೀಯ ಭಿನ್ನಾಭಿಪ್ರಾಯ ಗಳಿದ್ದರೂ ಸೌಹಾರ್ದಯುತ ವಾತಾವರಣ ಇತ್ತು. ಆದರೆ ಈಗಿನ ಪಾಶ್ಚಿಮಾತ್ಯ ಸಂಸ್ಕೃತಿಯ ಒತ್ತಾಯದ ಹೇರಿಕೆಯ ಶಿಕ್ಷಣ ವ್ಯವಸ್ಥೆಯನ್ನು ಭಾರತೀಯರಲ್ಲಿ ದೇಶೀಯತೆಯ ಪರಿಕಲ್ಪನೆಯನ್ನೇ ಹಾಳು ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಶೋಧನಾರ್ಥಿಗಳು ವಿದೇಶಿ ಪರಿಕಲ್ಪನೆಯ ಸಂಶೋಧನಾ ಕ್ರಮಗಳನ್ನು ಬಿಟ್ಟು ದೇಶೀಯ ಪದ್ಧತಿಯಲ್ಲಿ ದತ್ತಾಂಶ ಸಂಗ್ರಹಿಸಬೇಕು. ಪಾಶ್ಚಿಮಾತ್ಯ ಸಂಶೋಧಕರು, ವಿಜ್ಞಾನಿಗಳಿಂದ ಮಾಹಿತಿ ಪಡೆದರೂ ಅನುಕರಣೆ ಮಾಡದೇ ವಾಸ್ತವ ವಿಚಾರಗಳನ್ನು ಅವಲೋಕಿಸುವ ಸಂಶೋಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಪ್ರತಿಯೊಂದು ಸಂಶೋಧನೆಯಲ್ಲಿಯೂ ಭಾರತದ ಸುಪ್ರಸಿದ್ಧ ತತ್ವಜ್ಞಾನಿಗಳು, ಆರ್ಥಿಕ ತಜ್ಞರು, ವಿಜ್ಞಾನಿಗಳನ್ನು ವಿದೇಶಿಯರ ಜೊತೆ ಹೋಲಿಕೆ ಮಾಡುವ ಹೊಸ ಸಂಪ್ರದಾಯ ಶುರುವಾಗಿದೆ. ಇದು ಅತ್ಯಂತ ಹೀನಾಯವಾದುದು. ಜಾತ್ಯತೀತತೆಯ ಹೆಸರಿನಲ್ಲಿ ಭಾರತೀಯ ಮೂಲ ಪರಂಪರೆ, ಸಂಪ್ರದಾಯವನ್ನು ವಿರೋಧಿಸುವುದು, ದ್ವೇಷಿಸುವುದು ಸರಿಯಲ್ಲ. ಅವುಗಳಲ್ಲಿರುವ ಸಾರ ಸತ್ವ, ಮೌಲ್ಯಗಳಿಗೆ ಗೌರವ ನೀಡಬೇಕು. ಯಾವುದೇ ಜಾತಿ, ಧರ್ಮ, ಸಂಸ್ಕೃತಿ, ಸಮುದಾಯ ಇದ್ದರೂ ಭಾರತೀಯತೆಯ ಭಾವನೆಯನ್ನು ಪ್ರತಿನಿಧಿಸುವಂತಾಗಬೇಕು ಎಂದರು.

ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಮಾತನಾಡಿ, ಶಾಲಾ ಪಠ್ಯಕ್ರಮದಲ್ಲಿಯೇ ದೇಶೀಯತೆಯ ತತ್ವಗಳು, ಸಂಸ್ಕಾರ, ಮೌಲ್ಯಗಳನ್ನು ಅಳವಡಿಸಿ ಮಕ್ಕಳಿಗೆ ಬೋಧನೆ ಮಾಡುವಂತಾಗಬೇಕು. ಸ್ಥಳೀಯ ಸಂಪನ್ಮೂಲ, ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಿ, ಮನ್ನಣೆ ನೀಡುವ ಸಂಪ್ರದಾಯಕ್ಕೆ ಒತ್ತು ನೀಡಬೇಕು ಎಂದು ತಿಳಿಸಿದರು.

ಸಿಂಡಿಕೇಟ್ ಸದಸ್ಯೆ ವಿಜಯಲಕ್ಷ್ಮಿ ಹಿರೇಮಠ ಅವರು ದೇಶಿಯತೆ, ಸ್ವಾಭಿಮಾನಗಳು ಪ್ರತಿಯೊಬ್ಬರ ಜೀವನ ಕ್ರಮ ಆಗಬೇಕು. ವೈಯಕ್ತಿಕ ಹಿತಾಸಕ್ತಿಗಿಂತ ಸಮಾಜದ ವಿಶಾಲ ದೃಷ್ಟಿಕೋನದಿಂದ ವಿಷಯಗಳನ್ನು ತಿಳಿಯಲು ಮನಸ್ಸು ಮಾಡಿದಾಗ ಅದು ಸಾಧ್ಯವಾಗುತ್ತದೆ ಎಂದರು.

ಕುಲಸಚಿವೆ ಪ್ರೊ.ಗಾಯತ್ರಿ ದೇವರಾಜ್ ಮಾತನಾಡಿದರು. ಕಲಾ ನಿಕಾಯದ ಡೀನ್ ಪ್ರೊ.ಕೆ.ಬಿ.ರಂಗಪ್ಪ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪರೀಕ್ಷಾಂಗ ಕುಲಸಚಿವೆ ಪ್ರೊ.ಅನಿತಾ ಎಚ್.ಎಸ್., ಹಣಕಾಸು ಅಧಿಕಾರಿ ಡಿ.ಪ್ರಿಯಾಂಕ ಉಪಸ್ಥಿತರಿದ್ದರು. ಕಾರ್ಯಕ್ರಮದ ಸಂಯೋಜಕ ಡಾ. ಹುಚ್ಚೇಗೌಡ ವಂದಿಸಿದರು. ಕೃಪಾ ಕಾರ್ಯಕ್ರಮ ನಿರೂಪಿಸಿದರು.

ನಂತರ ನಡೆದ ವಿಚಾರಗೋಷ್ಠಿಯಲ್ಲಿ ಶಿವಮೊಗ್ಗದ ಪ್ರೊ.ಡಿ.ಎನ್.ಕುಮಾರಸ್ವಾಮಿ ಮಾತನಾಡಿದರು. ಸಂಶೋಧನಾ ಪ್ರಬಂಧ ಮಂಡನೆ ಗೋಷ್ಠಿಯಲ್ಲಿ ಡಾ. ಸೆಲ್ವಿ, ಡಾ. ಷಣ್ಮುಖಪ್ಪ, ಡಾ. ಶಿವಕುಮಾರ ಕಣಸೋಗಿ ಅಧ್ಯಕ್ಷತೆ ವಹಿಸಿದ್ದರು.

# ಸಚಿವ ಶಿವರಾಂ ಹೆಬ್ಬಾರ್‌ರಿಂದ ಶ್ರಮಿಕರ ಹಣ ಲೂಟಿ : ಆರೋಪ



**ಕಟ್ಟಡ ಕಟ್ಟುವ-ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಪ್ರತಿಭಟನೆ**

ದಾವಣಗೆರೆ, ಫೆ.27- ಕಟ್ಟಡ ಮತ್ತು ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಶ್ರಮಿಕರ ಹಣವನ್ನು ಲೂಟಿ ಹೊಡೆಯಲು ಯತ್ನಿಸುತ್ತಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕಾರ್ಮಿಕ ಇಲಾಖೆಯಲ್ಲಿನ ಹಗಲು ದರೋಡೆ ತಡೆಗಟ್ಟಬೇಕೆಂದು ಆಗ್ರಹಿಸಿ, ನಗರದಲ್ಲಿಂದು ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಡಳಿತ ಭವನದ ಮುಂದೆ ಸಂಘದ ರಾಜ್ಯಾಧ್ಯಕ್ಷ ಹೆಚ್.ಜಿ. ಉಮೇಶ್ ನೇತೃತ್ವದಲ್ಲಿ ಪ್ರತಿಭಟಿಸಿದ ಪದಾಧಿಕಾರಿಗಳು, ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಪಿ.ಕೆ. ಲಿಂಗರಾಜ್, ವಿ.ಲಕ್ಷ್ಮಣ್, ಭೀಮಾರೆಡ್ಡಿ, ಡಿ. ಷಣ್ಮುಗಂ, ಶಿವಕುಮಾರ್ ಡಿ. ಶೆಟ್ಟರ್, ಸೈಯದ್ ಗೌಸ್ ಪೀರ್, ಫಯಾಜ್ ಸೇರಿದಂತೆ ಇತರರು ಇದ್ದರು.

# ಬಹುಜನ ಸಮಾಜ ಪಾರ್ಟಿಯಿಂದ ಇಂದು ಧರಣಿ

ದಾವಣಗೆರೆ, ಫೆ.27 - ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ ರಾಯಚೂರು ಜಿಲ್ಲಾ ನ್ಯಾಯಾಧೀಶರು, ಹುಮನಾಬಾದ್ ತಹಶೀಲ್ದಾರ್ ಪ್ರದೀಪ್ ಹಿರೇಮಠ ಅವರನ್ನು ಅಮಾನತ್ತು ಮಾಡುವುದು ಸೇರಿದಂತೆ ಹಲವು ಬೇಡಿಕೆಗಳನ್ನಿಟ್ಟುಕೊಂಡು ಬಹುಜನ ಸಮಾಜ ಪಾರ್ಟಿ ವತಿಯಿಂದ ನಾಳೆ ದಿನಾಂಕ 28 ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಬೆ.11.30 ರಿಂದ ಸಂಜೆ 6ರವರೆಗೆ ಧರಣಿ ನಡೆಸಿ, ಮನವಿ ಸಲ್ಲಿಸಲಾಗುವುದು ಎಂದು ಜಿಲ್ಲಾಧ್ಯಕ್ಷ ಡಿ.ಹನುಮಂತಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ಹಾಗೂ ಹರಿಹರದಲ್ಲಿ ಸುವರ್ಣ ಕರ್ನಾಟಕ ಡಾ.ಬಿ.ಆರ್. ಅಂಬೇಡ್ಕರ್ ಭವನ ಶೀಘ್ರ ನಿರ್ಮಾಣವಾಗಬೇಕು. ಪ್ರೊ.ಬಿ. ಕೃಷ್ಣಪ್ಪ ಅಧ್ಯಯನ ಪೀಠ ದಾವಣಗೆರೆ ವಿವಿಯಲ್ಲಿ ಸ್ಥಾಪನೆಯಾಗಬೇಕು. ಅವರ ಜನ್ಮ ನಿವಾಸ ಸ್ಮಾರಕ ಕೇಂದ್ರವಾಗಬೇಕು. ಪಾಲಿಕೆಯ 30ನೇ ವಾರ್ಡ್ ಗುಡಿಸಲು ತೆರವು ಕಾರ್ಯಾಚರಣೆ ಸ್ಥಗಿತಗೊಳಿಸಿ, ನಿರಾಶ್ರಿತರಿಗೆ ನಿವೇಶನ ನೀಡಬೇಕು. ಹರಿಹರದ ರಾಜೀವ್ ಗಾಂಧಿ ವಸತಿ ನಿಗಮದ ಮನೆಗಳಿಗೆ ಖಾತೆ ಮಾಡಲು ಹಣ ಕೇಳುವುದನ್ನು ಬಿಟ್ಟು, ಹಕ್ಕು ಪತ್ರ ವಿತರಿಸಬೇಕು ಎಂದವರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಕಾರ್ಯದರ್ಶಿ ಹೆಚ್.ಮಲ್ಲೇಶ್, ಜಿಲ್ಲಾ ಸಂಯೋ ಜಕರಾದ ಯಶೋಧ ಪ್ರಕಾಶ್, ಉಪಾಧ್ಯಕ್ಷ ವೆಂಕಟೇಶ್ ಬಾಬು, ಮುಖಂಡ ಹೆಚ್.ಸಿ. ಮಲ್ಲಪ್ಪ, ಎಸ್.ಹೆಚ್. ಅಣ್ಣಪ್ಪ, ಚನ್ನಬಸಪ್ಪ ಉಪಸ್ಥಿತರಿದ್ದರು.

# ಇಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ದಾವಣಗೆರೆ: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಜಿಲ್ಲಾ ಸಮಿತಿಯಿಂದ ಜೈನ್ ತಾಂತ್ರಿಕ ಮಹಾವಿದ್ಯಾಲಯ ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಬಾಡಾ ಕ್ರಾಸ್‌ನಲ್ಲಿರುವ ಜೈನ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಕೃಷಿ ವಿಜ್ಞಾನಿ ಡಾ. ಎಂ.ಜಿ. ಬಸವನಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಹಾವಿದ್ಯಾಲಯದ ಪ್ರಾಂಶುಪಾಲರು ಹಾಗೂ ನಿರ್ದೇಶಕ ಡಾ. ಡಿ.ಬಿ. ಗಣೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಪರಿಷತ್ತಿನ ಗೌರವಾಧ್ಯಕ್ಷ ಡಾ. ಜೆ.ಬಿ. ರಾಜ್, ಶಿಕ್ಷಣ ತಜ್ಞ ಡಾ. ಹೆಚ್.ವಿ.ವಾಮದೇವಪ್ಪ, ಸಹಾಯಕ ಪ್ರಾಧ್ಯಾಪಕ ಡಾ. ಎಂ. ಆರ್. ಜಗದೀಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

# ಎ.ವಿ.ಕೆ ಕಾಲೇಜಿನಲ್ಲಿ ಇಂದು ವಿಜ್ಞಾನ ದಿನಾಚರಣೆ

ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಆಶ್ರಯದಲ್ಲಿ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಮತ್ತು ರ್‍ಯಾಂಕ್ ವಿಜೇತರಿಗೆ ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ದಾವಣಗೆರೆ ವಿವಿ ಯ ರಿಜಿಸ್ಟ್ರಾರ್ ಡಾ. ಗಾಯತ್ರಿ ದೇವರಾಜ್ ಉದ್ಘಾಟಿಸುವರು. ಎ.ವಿ.ಕೆ. ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಆರ್.ಆರ್. ಶಿವಕುಮಾರ್ ಮತ್ತು ಶ್ರೀಮತಿ ಜಿ.ಸಿ. ನೀಲಾಂಬಿಕ ಅವರುಗಳು ಉಪಸ್ಥಿತರಿರುವರು.

# ಬಾಪೂಜಿ ಬಿ-ಸ್ಕೂಲ್‌ನಲ್ಲಿ ಇಂದು ವಾಣಿಜ್ಯೋತ್ಸವ

ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಶನ್ ಕಾಲೇಜಿನಲ್ಲಿ ಇಂದು ಪಿಯುಸಿ ವಿದ್ಯಾರ್ಥಿಗಳಿಗಾಗಿ ವಿನೂತನ ವಾಣಿಜ್ಯ ಪ್ರದರ್ಶನ ಆಯೋಜಿಸಲಾಗಿದೆ.

ಧಾರವಾಡದ ಹ್ಯೂಮನ್ ಮೈಂಡ್ ಸೆಟ್ ಕೋಚ್ ಮಹೇಶ್ ಬಿ. ಮಸಾಳ್ ಕಾರ್ಯಕ್ರಮ ಉದ್ಘಾಟಿಸುವರು. ಕಾಲೇಜಿನ ಅಧ್ಯಕ್ಷರಾದ ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಾಚಾರ್ಯ ಡಾ. ಬಿ. ವೀರಪ್ಪ ಉಪಸ್ಥಿತರಿರುವರು.

ವಾಣಿಜ್ಯೋತ್ಸವದ ಅಂಗವಾಗಿ ಮಾಡೆಲ್ ಪ್ರಜೆಂಟೇಶನ್, ಮಾರ್ಕೆಂಟಿಂಗ್ ಸ್ಟೋರೀಸ್, ಯಂಗ್ ಎಂಟರ್‌ಪ್ರಿನ್ಯೂರ್, ಬ್ಯುಸಿನೆಸ್ ಕ್ವಿಜ್, ಇಂಟರ್ ನ್ಯಾಷನಲ್ ಕರೆನ್ಸಿ ಎಕ್ಸಿಬಿಷನ್, ಪೋಸ್ಟರ್ ಪ್ರೆಜೆಂಟೇಶನ್, ಶೋಕೇಷಿಂಗ್ 20ನೇ ಸೆಂಚುರಿ ಪ್ರಾಡಕ್ಟ್ಸ್ ಮತ್ತು ಕಲಾತ್ಮಕ ನೃತ್ಯ ಎಂಬ ವಿಭಿನ್ನ, ವಿನೂತನ ಕಾರ್ಯಕ್ರಮಗಳು ನಡೆಯಲಿವೆ ಎಂದು ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ತಿಳಿಸಿದ್ದಾರೆ.

# ಹೋಟೆಲ್ ಆಸ್ತಿ ತೆರಿಗೆ ರಿಯಾಯಿತಿ ನೋಂದಣಿ ಶಿಬಿರ

ದಾವಣಗೆರೆ, ಫೆ.27- ಕೋವಿಡ್-19 ಹಿನ್ನೆಲೆಯಲ್ಲಿ ಹಣಕಾಸು ವರ್ಷದಲ್ಲಿ ಜಿಲ್ಲಾ ವ್ಯಾಪ್ತಿಯ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನೋರಂಜನಾ ಪಾರ್ಕ್‌ಗಳಿಗೆ ಆಸ್ತಿ ತೆರಿಗೆ ಪಾವತಿಯಲ್ಲಿ ಶೇ. 50 ರಷ್ಟು ರಿಯಾಯಿತಿ ಹಾಗೂ 3 ತಿಂಗಳ ವಿದ್ಯುಚ್ಛಕ್ತಿ ಡಿಮ್ಯಾಂಡ್/ ಫಿಕ್ಸೆಡ್ ಡೆಪಾಸಿಟ್ ಮನ್ನಾ ಸೌಲಭ್ಯ ಘೋಷಿಸಲಾಗಿದೆ.

ನಾಳೆ ದಿನಾಂಕ ಮಾ. 1 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಹೋಟೆಲ್ ಸಿಕಾಡದಲ್ಲಿ ನೋಂದಣಿ ಶಿಬಿರ ಆಯೋಜಿಸಲಾಗಿದೆ. ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯ ಹೋಟೆಲ್, ಲಾಡ್ಜಸ್, ರೆಸ್ಟೋರೆಂಟ್, ರೆಸಾರ್ಟ್, ಟ್ರಾವೆಲ್ ಏಜೆನ್ಸಿ ಮತ್ತು ಟೂರ್ ಆಪರೇ ಟರ್‌ಗಳು, ಮನರಂಜನಾ ಪಾರ್ಕ್‌ಗಳ ಮಾಲೀಕರು ನೋಂದಣಿ ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸಿ : ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ದಾವಣಗೆರೆ ಜಿಲ್ಲೆ ಕಛೇರಿಯ ದೂರವಾಣಿ ಸಂಖ್ಯೆ:08192-230123.

# ಎಂ.ಎಂ. ಕಾಲೇಜಿನಲ್ಲಿ ಇಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ದಾವಣಗೆರೆ : ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಕಾಲೇಜಿನ ಸಭಾಂಗಣದಲ್ಲಿ ಕಾರ್ಯಕ್ರಮದ ಉದ್ಘಾಟನೆ ನಡೆಯುವುದು. ಅಧ್ಯಕ್ಷತೆಯನ್ನು ಡಾ. ಎಂ.ಎಂ. ಪಟ್ಟಣಶೆಟ್ಟಿ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಬಿ.ಸಿ. ಪ್ರಸನ್ನಕುಮಾರ್ ಆಗಮಿಸುವರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಕೆ.ಟಿ. ನಾಗರಾಜ ನಾಯ್ಕ ಉಪಸ್ಥಿತರಿರುವರು.

# 1 ರಂದು ಮಾಂಸ ಮಾರಾಟ ನಿಷೇಧ

ದಾವಣಗೆರೆ, ಫೆ.27- ನಾಡಿದ್ದು ಮಾರ್ಚ್ 1 ರಂದು ಮಹಾಶಿವರಾತ್ರಿ ಪ್ರಯುಕ್ತ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ. ತಪ್ಪಿದಲ್ಲಿ ಮಹಾನಗರ ಪಾಲಿಕೆ ಕಾಯ್ದೆಯ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮಹಾನಗರ ಪಾಲಿಕೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಉಕ್ರೇನ್‌ನಿಂದ ಎಲ್ಲ ನಾಗರಿಕರನ್ನು ಕರೆ ತರಲು ಅವಿರತ ಶ್ರಮ : ಮೋದಿ

ಬಸ್ತಿ (ಉತ್ತರ ಪ್ರದೇಶ), ಫೆ. 27 – ಸಂಕಷ್ಟದ ಸಮಯದಲ್ಲಿ ತನ್ನ ಜನರ ರಕ್ಷಣೆಗೆ ಭಾರತ ಆದ್ಯತೆ ನೀಡಿದೆ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಉಕ್ರೇನ್‌ನಲ್ಲಿ ಸಿಲುಕಿರುವ ಎಲ್ಲಾ ನಾಗರಿಕರನ್ನು ವಾಪಸ್ ಕರೆ ತರಲು ಸರ್ಕಾರ ಅವಿರತವಾಗಿ ಶ್ರಮಿಸುತ್ತಿದೆ ಎಂದಿದ್ದಾರೆ.

ಉತ್ತರ ಪ್ರದೇಶದ ಬಸ್ತಿಯಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡುತ್ತಿದ್ದ ಪ್ರಧಾನಿ, ವಿಶ್ವದ ಇತರೆಡೆ ಉಂಟಾಗಿರುವ ಪ್ರಕ್ಷುಬ್ಧತೆಯನ್ನು ಪ್ರಸ್ತಾಪಿಸಿದ್ದಾರಲ್ಲದೇ, ಭಾರತವನ್ನು ಆತ್ಮನಿರ್ಭರ ಮಾಡಬೇಕಿದೆ ಎಂದಿದ್ದಾರೆ.

ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ವಾಪಸ್ ಕರೆ ತರುವ ಕಾರ್ಯಾಚರಣೆಗೆ ಶನಿವಾರ ಚಾಲನೆ ನೀಡಲಾಗಿದೆ.

# ಇಂದು ರೋಟರಿ ಕ್ಲಬ್‌ನಿಂದ ಹಿಮೋಫಿಲಿಯಾ ವ್ಯಾನ್ ಹಸ್ತಾಂತರ

ದಾವಣಗೆರೆ : ರೋಟರಿ ಕ್ಲಬ್ ದಾವಣಗೆರೆ ದಕ್ಷಿಣದಿಂದ ಫೆ.28 ರಂದು ಮಧ್ಯಾಹ್ನ 12 ಕ್ಕೆ ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ದಾವಣಗೆರೆಗೆ 'ಸ್ಮೈಲ್ ಆನ್ ರೋಟರಿ ಹಿಮೋಫಿಲಿಯಾ ವ್ಯಾನ್ ಹಸ್ತಾಂತರ' ಕಾರ್ಯಕ್ರಮವನ್ನು ನಗರದ ರೋಟರಿ ಬಾಲಭವನದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಜಿಲ್ಲಾ ಗವರ್ನರ್ ತಿರುಪತಿ ನಾಯ್ಡು, ಪದಾಧಿಕಾರಿಗಳಾದ ಚಿನ್ನಪ್ಪ ರೆಡ್ಡಿ, ಕೆ. ಶ್ರೀರಾಮ ಮೂರ್ತಿ, ಕೆ. ಮಧುಪ್ರಸಾದ್, ನಾರಾಯಣ ಸ್ವಾಮಿ, ನಯನ್ ಪಾಟೀಲ್, ವಿಶ್ವಜಿತ್ ಕೆ. ಜಾಧವ್, ಆರ್.ಜಿ. ಬದ್ರಿನಾಥ್ ಪಾಲ್ಗೊಳ್ಳಲಿದ್ದಾರೆ.

ಆಹ್ವಾನಿತರಾಗಿ ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ಉದ್ಯಮಿ ಎ.ಎಸ್. ವೀರಣ್ಣ, ಡಾ. ನಾರಾಜ್, ಜಿಲ್ಲಾ ಸರ್ಜನ್ ಡಾ. ಷಣ್ಮುಖಪ್ಪ ಭಾಗವಹಿಸಲಿದ್ದಾರೆ.

# ನಗರದಲ್ಲಿ ಇಂದು ಉಪನ್ಯಾಸ

ದಾವಣಗೆರೆ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ವತಿಯಿಂದ ಸಾಹಿತಿ ಟಿ. ಗಿರಿಜಾ ಅವರ ದತ್ತಿ ನಿಧಿ ಕಾರ್ಯಕ್ರಮದ ವಿಶೇಷ ಉಪನ್ಯಾಸ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಕ್ಕೆ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಸಾಹಿರಾಭಾನು ಎ. ಫಾರೂಖಿ ಉದ್ಘಾಟಿಸಲಿದ್ದು, ಚಿಗಟೇರಿ ಆಸ್ಪತ್ರೆ ಅಧೀಕ್ಷಕ, ಸಾಹಿತಿ ಡಾ. ಆನಂದ್ ಋಗ್ವೇದಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಮುಖ್ಯಅತಿಥಿಗಳಾಗಿ ದತ್ತಿನಿಧಿ ಸ್ಥಾಪಕರಾದ ಪಿ.ಎಸ್. ಶೈಲಜಾ, ಪತ್ರಾಂಕಿತ ವ್ಯವಸ್ಥಾಪಕರಾದ ಗೀತಾದೇವಿ, ಜಾನಪದ ತಜ್ಞ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ, ಐಕ್ಯುಎಸಿ ಸಂಚಾಲಕ ಡಾ. ಕೆ. ನಾರಾಯಣಸ್ವಾಮಿ ಪಾಲ್ಗೊಳ್ಳಲಿದ್ದು, ಕನ್ನಡ ವಿಭಾಗದ ಮುಖ್ಯಸ್ಥ ಹೆಚ್. ಗಿರಿಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ.

# ಗುರುಬಸಮ್ಮ ವಿ. ಚಿಗಟೇರಿ ಶಾಲೆಯಲ್ಲಿ ಇಂದು ವಿಜ್ಞಾನ ದಿನಾಚರಣೆ

ದಾವಣಗೆರೆ ನಗರದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಜ್ಞಾನ ದಿನಾಚರಣೆ ಮತ್ತು ವಿಜ್ಞಾನ ವಸ್ತು ಪ್ರದರ್ಶನವನ್ನು ಇಂದು ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಸಂಸ್ಥೆಯ ಕಾರ್ಯದರ್ಶಿ ಮನೋಹರ್ ಎಸ್. ಚಿಗಟೇರಿ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಹಕಾರ್ಯದರ್ಶಿ ಶ್ರೀಮತಿ ಸೌಮ್ಯ ಬಸವರಾಜ್, ಮುಖ್ಯ ಶಿಕ್ಷಕರುಗಳಾದ ಎಸ್. ನಾಗರಾಜ್, ಶ್ರೀಮತಿ ಎಂ.ಎಸ್. ವೀರಮ್ಮ ಆಗಮಿಸಲಿದ್ದಾರೆ. ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಹೆಚ್. ನಿಂಗಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

# ಇಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಆವರಗೆರೆಯಲ್ಲಿರುವ ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಸಂಸ್ಥೆಯ ಶ್ರೀ ಗುರು ಪಂಚಾಕ್ಷರಿ ಗವಾಯಿ ಮೆಮೋರಿಯಲ್ ಕಾಂಪೋಜಿಟ್ ಶಾಲಾವರಣದಲ್ಲಿ ಇಂದು ಮಧ್ಯಾಹ್ನ 2.30ಕ್ಕೆ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ' ಹಾಗೂ ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ ಮತ್ತು ನಿಕಟಪೂರ್ವ ಮಹಾಪೌರ ಎಸ್.ಟಿ. ವೀರೇಶ್ ಅವರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಸಂಸ್ಥೆಯ ಜಂಟಿ ಕಾರ್ಯದರ್ಶಿ ಹೆಚ್.ಎಸ್.ಸಿದ್ದಲಿಂಗಸ್ವಾಮಿ ತಿಳಿಸಿದ್ದಾರೆ.

ಅಧ್ಯಕ್ಷತೆಯನ್ನು ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ ವಹಿಸಿಕೊಳ್ಳಲಿದ್ದು, ಉದ್ಘಾಟನೆಯನ್ನು ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಜ್ಯ ವಿಜ್ಞಾನ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ಎಂ.ಗುರುಸಿದ್ದಸ್ವಾಮಿ, ಕಲಾಕುಂಚ ಯಕ್ಷರಂಗ ಸಂಸ್ಥೆಗಳ ಸಂಸ್ಥಾಪಕ ಸಾಲಿಗ್ರಾಮ ಗಣೇಶ್‌ಶೆಣೈ, ಉಪನ್ಯಾಸಕರಾದ ಶ್ರೀಮತಿ ಸುಗ್ಗಲಾದೇವಿ ಆಗಮಿಸಲಿದ್ದಾರೆ ಎಂದು ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯವರು ತಿಳಿಸಿದ್ದಾರೆ.

# ಜ್ಞಾನಾರ್ಜನೆಯ ಮೂಲ ಕಲಾ ಪರಂಪರೆ

## ಗುರುಬಸಮ್ಮ ಪ್ರೌಢಶಾಲೆಯಲ್ಲಿ ನಡೆದ ಯಕ್ಷಗಾನ ತರಬೇತಿ ಶಿಬಿರದಲ್ಲಿ ಸದಾನಂದ ಹೆಗಡೆ



ದಾವಣಗೆರೆ, ಫೆ.27- ಶಿಕ್ಷಣದ ಜತೆಯಲ್ಲಿ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಲಲಿತಕಲೆಗಳ ಎಲ್ಲ ಪ್ರಕಾರಗಳ ಸಂಯೋಜನೆಯಿಂದ ವಿದ್ಯಾರ್ಜನೆಗೆ ಪರಿಪೂರ್ಣತೆ ಬರುತ್ತದೆ. ವಿದ್ಯಾರ್ಥಿಗಳ ಸುದೀರ್ಘ ಜೀವನದಲ್ಲಿ ವಿದ್ಯಾಭ್ಯಾಸದ ಜೊತೆಯಲ್ಲೇ ಕಲೆ ಬರುತ್ತದೆ ಎಂದು ಪತ್ರಕರ್ತ ಸದಾನಂದ ಹೆಗಡೆ ತಮ್ಮ ಮನದಾಳದ ಮಾತು ವ್ಯಕ್ತಪಡಿಸಿದರು.

ನಗರದ ನರಸರಾಜ ರಸ್ತೆಯ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ಮತ್ತು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಯಕ್ಷರಂಗ - ಯಕ್ಷಗಾನ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಶಾಲಾ ಮಕ್ಕಳಿಗೆ ಯಕ್ಷಗಾನ ತರಬೇತಿ ಶಿಬಿರವನ್ನು ನಿನ್ನೆ ದಿನ ಯಕ್ಷಗಾನ ಚಂಡೆ ಭಾರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಸಾಂಸ್ಕೃತಿಕ ಚಟುವಟಿಕೆಗಳು ಯಕ್ಷಕಲಾ ಪರಂಪರೆಗಳಲ್ಲಿ ಕಠಿಣ ಪರಿಶ್ರಮದಿಂದ, ಗಂಭೀರವಾಗಿ ಬದ್ಧತೆಯಿಂದ ತೊಡಗಿಸಿಕೊಂಡರೆ ಯಕ್ಷಕಲೆ ಕರಗತವಾಗುತ್ತದೆ. ಜ್ಞಾನಾರ್ಜನೆಯ ಮೂಲ ಕಲಾ ಪರಂಪರೆ. ಕರ್ನಾಟಕದ ಕರಾವಳಿ ಜಿಲ್ಲೆಗಳ ಆರಾಧನಾ ಕಲೆ ಯಕ್ಷಗಾನ ಕಲಿಕೆಯಿಂದ ಪೂಜ್ಯತೆಯ ಭಾವನೆಯಿಂದ ನಮ್ಮ ಜೀವನಕ್ಕೆ ಸಾರ್ಥಕತೆ ಬರುತ್ತದೆ ಎಂದು ಅವರು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಜಯವಿಭವ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮನೋಹರ್ ಎಸ್. ಚಿಗಟೇರಿ, ಹಾಗೂ ಗುರುಬಸಮ್ಮ ವಿ.ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಹೆಚ್. ನಿಂಗಪ್ಪ ಮಾತನಾಡಿ, ಮಕ್ಕಳು ಶಿಕ್ಷಣದ ಜತೆಯಲ್ಲಿ ಕಲಾ ಪರಂಪರೆಯ ಮೇಳೈಕೆಯೊಂದಿಗೆ ಮುಂದುವರೆದರೆ ಅವರ ಉನ್ನತ ಸಾಧನೆಗೆ ಭದ್ರವಾದ ಬುನಾದಿ. ಹೊಸ ತಂತ್ರಜ್ಞಾನದ ಭರಾಟೆಯಲ್ಲಿ ಮರೆಯಾಗುತ್ತಿರುವ ನಮ್ಮ ನಾಡು - ನುಡಿಯ ಕಲಾ ಪ್ರಕಾರಗಳನ್ನು ಪುನರುತ್ಥಾನಗೊಳಿಸುವ ಈ ಯಕ್ಷಗಾನ ಪ್ರಕಾರ ಮಕ್ಕಳಲ್ಲಿ ಸ್ಫೂರ್ತಿ ಮೂಡಿಸುತ್ತದೆ ಎಂದರು.

ಗುರುಬಸಮ್ಮ ವಿ.ಚಿಗಟೇರಿ ಪ್ರೌಢಶಾಲೆ ಆವರಣದಲ್ಲಿ ನಡೆದ ಈ ಸಮಾರಂಭದಲ್ಲಿ ವಿದ್ಯಾರ್ಥಿನಿ ಹರಿಣಿ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಶಿಕ್ಷಕಿ ಜೆ.ಕೆ.ಅನುಷ ಸ್ವಾಗತಿಸಿದರು.

ಕಲಾಕುಂಚ ಯಕ್ಷರಂಗ ಸಂಸ್ಥೆಗಳ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿದರು. ಯಕ್ಷರಂಗದ ಯಕ್ಷಗಾನ ಶಿಬಿರದ ಸಂಚಾಲಕ ಬಿ.ಎನ್.ಪಾರ್ಶ್ವನಾಥ್ ಜೈನ್, ಯಕ್ಷಗಾನ ಗುರುಗಳಾದ ಹಟ್ಟಿಯಂಗಡಿ ಆನಂದಶೆಟ್ಟಿ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬೇಳೂರು ಸಂತೋಷ್ ಕುಮಾರ್ ಶೆಟ್ಟಿ, ಸಮಿತಿ ಸದಸ್ಯ ಎಂ.ಎಸ್.ಪ್ರಸಾದ್, ಹಿರಿಯ ಯಕ್ಷಗಾನ ಕಲಾವಿದರಾದ ಅನಂತ್ ಹೆಗಡೆ, ಪ್ರದೀಪ್ ಕಾರಂತ್, ಕಾರ್ಯಕ್ರಮದ ಸಂಯೋಜಕ ಎನ್. ರಂಗನಾಥ್ ಮುಖ್ಯ ಶಿಕ್ಷಕರುಗಳಾದ ಸುರೇಶ್ ನಾಯ್ಕ್, ಶ್ರೀಮತಿ ವೀರಮ್ಮ ಎಂ.ಎಸ್. ಮತ್ತಿತರರು ಉಪಸ್ಥಿತರಿದ್ದರು.

ಶಿಕ್ಷಕರಾದ ಎಸ್. ಬಸವರಾಜ್ ಕಾರ್ಯಕ್ರಮ ನಿರೂಪಿಸಿದರು, ಸಭಾ ಕಾರ್ಯಕ್ರಮದ ನಂತರ ಶಿಬಿರಾರ್ಥಿಗಳಿಗೆ ಸಾಂಕೇತಿಕವಾಗಿ ಯಕ್ಷಗಾನ ಹೆಜ್ಜೆಗಳೊಂದಿಗೆ ಶಿಬಿರಕ್ಕೆ ಚಾಲನೆ ನೀಡಲಾಯಿತು. ಶಿಕ್ಷಕ ಎಸ್.ವಿ. ನಾಗರಾಜ್ ವಂದಿಸಿದರು.

# ಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ, ಹೂವಿನ ಅಲಂಕಾರ



ದಾವಣಗೆರೆ, ಫೆ.27 - ನಗರದ ಗೀತಾಂಜಲಿ ಟಾಕೀಸ್ ಹತ್ತಿರದ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಅಂಗವಾಗಿ ನಾಡಿದ್ದು ದಿನಾಂಕ 01 ರ ಮಂಗಳವಾರ ಕ್ಷೀರಾಭಿಷೇಕ, ವಿಶೇಷ ರುದ್ರಾಭಿಷೇಕ, ಶಿವಾಷ್ಟೋತ್ತರ ನಾಮಾವಳಿ, ಬಿಲ್ವಾರ್ಚನೆ, ಹೂವಿನ ಅಲಂಕಾರ ಹಾಗೂ ತೀರ್ಥಪ್ರಸಾದ ಏರ್ಪಡಿಸಲಾಗಿದೆ.

# ರಾಜ್ಯದ 30 ವಿದ್ಯಾರ್ಥಿಗಳು ಉಕ್ರೇನ್‌ನಿಂದ ವಾಪಸ್

ಬೆಂಗಳೂರು, ಫೆ. 27 – ರಾಜ್ಯದ 30 ವಿದ್ಯಾರ್ಥಿಗಳು ಸಮರ ಪೀಡಿತ ಉಕ್ರೇನ್‌ನಿಂದ ವಾಪಸ್ಸಾಗಿದ್ದಾರೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಇದುವರೆಗೂ ದೊರೆತಿರುವ ಮಾಹಿತಿಯ ಪ್ರಕಾರ ರಾಜ್ಯದ 397 ಜನರು ಉಕ್ರೇನ್‌ನಲ್ಲಿ ಸಿಲುಕಿದ್ದಾರೆ. ಇವರಲ್ಲಿ 129 ಜನ ಬೆಂಗಳೂರಿನವರು.

ಕೀವ್‌ನಲ್ಲಿರುವ ಭಾರತದ ರಾಯಭಾರಿ ಕಚೇರಿ ತೆರವು ಕಾರ್ಯಾಚರಣೆ ಆರಂಭಿಸಿದೆ. ಆಪರೇಷನ್ ಗಂಗಾ ಹೆಸರಿನ ಕಾರ್ಯಾಚರಣೆಯಲ್ಲಿ ನೆರೆ ದೇಶಗಳಾದ ರೊಮೇನಿಯಾ, ಬುಡಾಪೆಸ್ಟ್, ಬುಕಾರೆಸ್ಟ್ ಮುಂತಾದ ದೇಶಗಳ ಮೂಲಕ ಭಾರತೀಯರನ್ನು ಕರೆ ತರಲಾಗುತ್ತಿದೆ. ರಾಜ್ಯದ 30 ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ವಾಪಸ್ ಕರೆ ತರಲಾಗಿದೆ ಎಂದು ವಿಕೋಪ ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ಹೇಳಿದ್ದಾರೆ.

# ರಾಣೇಬೆನ್ನೂರಿನಲ್ಲಿ ಇಂದು ಪ್ರತಿಭಟನೆ

ರಾಣೇಬೆನ್ನೂರು, ಫೆ.28- ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ಹಾಗೂ ತಾಲ್ಲೂಕಿನ ಸರ್ವ ಸಂಘಟನೆಗಳ ಒಕ್ಕೂಟ ಜಂಟಿಯಾಗಿ ನ್ಯಾಯಾಧೀಶರ ವಜಾಕ್ಕೆ ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಂಡಿವೆ.

ಜನವರಿ 26 ರಂದು ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿರುವ ನ್ಯಾಯಾಧೀಶ ಮಲ್ಲಿಕಾರ್ಜುನಗೌಡ ಪಾಟೀಲ ಅವರನ್ನು ವರ್ಗಾವಣೆ ಮಾಡಿರುವುದು ಸೂಕ್ತ ಕ್ರಮವಲ್ಲ. ಅವರನ್ನು ಕೆಲಸದಿಂದಲೇ ವಜಾ ಮಾಡುವಂತೆ ಒತ್ತಾಯಿಸಿದ್ದಾರೆ.

ADMISSION OPEN FOR 2021-22

(DMLT), (DHI) (X-ray), BAMS

ಈ ವರ್ಷದ ಕಡೆಯ ದಿನ
(last date 28.02.2022)
ಕೆಲವೇ ಸೀಟುಗಳು ಮಾತ್ರ

ಸ್ಕಾಲರ್‌ಶಿಪ್ ಸೌಲಭ್ಯವಿದೆ.
ಹಾಸ್ಟೆಲ್ ಸೌಲಭ್ಯವಿದೆ.

VS Institute off paramedical science
Near Ram & Co Circle, Davangere.
85532 78258, 90195 80600

# ರಾಜನಹಳ್ಳಿ ಶ್ರೀಗಳಿಗೆ ವಿವಿಧ ಮಠಾಧೀಶರ ಬೆಂಬಲ



**18ನೇ ದಿನಕ್ಕೆ ಕಾಲಿಟ್ಟ ಸತ್ಯಾಗ್ರಹ**

ಬೆಂಗಳೂರು, ಫೆ.27 - ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹವು ಭಾನುವಾರ 18ನೇ ದಿನಕ್ಕೆ ಕಾಲಿಟ್ಟಿದೆ.

ಚಿತ್ರದುರ್ಗದ ಬಂಜಾರ ಗುರುಪೀಠದ ಶ್ರೀ ಸಂತ ಸೇವಾಲಾಲ್ ಸ್ವಾಮೀಜಿ, ಸರ್ವಧರ್ಮ ಪೀಠದ ಶ್ರೀ ಶಾಂತವೀರ ಸ್ವಾಮೀಜಿ, ಗುಳೇದಗುಡ್ಡದ ಶ್ರೀ ಬಸವರಾಜ ಪಟ್ಟದಾರ್ಯ ಸ್ವಾಮೀಜಿ ಅವರು ಈ ದಿನದ ಧರಣಿಯಲ್ಲಿ ಭಾಗವಹಿಸಿ, ಶ್ರೀಗಳ ಹೋರಾಟವನ್ನು ಸರ್ಕಾರ ನಿರ್ಲಕ್ಷ್ಯ ಮಾಡದೇ ಕೂಡಲೇ ಸ್ಪಂದಿಸಬೇಕೆಂದು ಆಗ್ರಹಿಸಿದರು.

ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ, ನಿವೃತ್ತ ಅಧಿಕಾರಿ ಕೆ.ಎಸ್. ಮೃತ್ಯುಂಜಯಪ್ಪ, ಹರ್ತಿಕೋಟೆ ವೀರೇಂದ್ರಸಿಂಹ, ಸಮಾಜದ ಚಿಕ್ಕಮಗಳೂರು ಜಿಲ್ಲಾಧ್ಯಕ್ಷ ಜಿ.ಕೆ.ಭೀಮಪ್ಪ, ಯಾದಗಿರಿ ಜಿಲ್ಲಾಧ್ಯಕ್ಷ ಮರಿಯಪ್ಪ ನಾಯಕ, ಯುವ ಮುಖಂಡ ಅರವಿಂದ್ ಮುಗದೂರು, ಚಳುವಳಿ ರಾಜಣ್ಣ, ನಿವೃತ್ತ ಅಧಿಕಾರಿ ವೆಂಕಟಗೌಡ, ಕರ್ನಾಟಕ ನಾಯಕ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಪ್ರಭುಸ್ವಾಮಿ, ವಕೀಲ ಆನಂದ್ ನಾಯಕ ಸೇರಿದಂತೆ ಮುಂಡರಗಿ, ಚಳ್ಳಕೆರೆ, ಕೂಡ್ಲಿಗಿ, ಶಹಾಪುರ, ಹೊಸದುರ್ಗ, ಅಜ್ಜಂಪುರ, ಯಾದಗಿರಿ ತಾಲ್ಲೂಕುಗಳ ನಾಯಕ ಸಮಾಜದ ಮುಖಂಡರು ಧರಣಿಯಲ್ಲಿ ಭಾಗವಹಿಸಿದ್ದರು.

## ಪೋಲ್ಯಾಂಡ್‌ನಲ್ಲಿ ಸಿಲುಕಿದ ಭಾರತೀಯರು

ವಾರ್ಸಾ, ಫೆ. 27 – ಉಕ್ರೇನ್ ಜನರು ತಮ್ಮಲ್ಲಿಗೆ ಬರಲು ಪೋಲ್ಯಾಂಡ್ ಹಾಗೂ ಹಂಗೇರಿ ಅನುಮತಿ ನೀಡಿವೆ. ಆದರೆ, ಕೆಲ ವಿದೇಶಿ ನಾಗರಿಕರು ಪೋಲ್ಯಾಂಡ್ ಗಡಿಯಲ್ಲಿ ಸಮಸ್ಯೆಗೆ ಸಿಲುಕಿದ್ದಾರೆ.

ಕೆಲ ಭಾರತೀಯರು ಉಕ್ರೇನ್‌ನಿಂದ ಪೋಲ್ಯಾಂಡ್‌ಗೆ ತೆರಳಲು ಬಯಸಿದ್ದರು. ಆದರೆ, ಅವರು ಪೋಲ್ಯಾಂಡ್‌ನ ಮೆಡ್ಯೆಕಾ ಗಡಿಯಲ್ಲಿ ಸಿಲುಕಿದ್ದಾರೆ. ಗಡಿ ದಾಟಲು ಸಾಧ್ಯವಾಗುತ್ತಿಲ್ಲ ಎಂದು ಅಲ್ಲಿನ ಭಾರತೀಯ ಸ್ವಯಂ ಸೇವಕರು ತಿಳಿಸಿದ್ದಾರೆ.

ಭಾರತೀಯರನ್ನು ರೊಮೇನಿಯ ಹಾಗೂ ಹಂಗೇರಿಗೆ ಕಳಿಸಿ ಅಲ್ಲಿಂದ ತೆರವುಗೊಳಿಸುವುದಾಗಿ ಕೀವ್‌ನಲ್ಲಿರುವ ರಾಯಭಾರಿ ಕಚೇರಿ ತಿಳಿಸಿತ್ತು. ಆದರೆ, ಕೆಲವರು ಈ ಬಗ್ಗೆ ತಿಳಿಯದೇ ಪೋಲ್ಯಾಂಡ್ ಗಡಿಗೆ ತೆರಳಿದ್ದಾರೆ. ಸುದೀರ್ಘ ದೂರದವರೆಗೆ ನಡೆದುಕೊಂಡು ಬಂದಿರುವ ಇವರು, ನೂರಾರು ಕಿ.ಮೀ. ದೂರದಲ್ಲಿರುವ ರೊಮೇನಿಯಾಗೆ ತೆರಳಲು ಶಕ್ತರಾಗಿಲ್ಲ. ಪೋಲ್ಯಾಂಡ್ ಗಡಿ ದಾಟಿ ಬಂದಿ ರುವ ಭಾರತೀಯರಿಗೆ ಆಶ್ರಯ ನೀಡಲು ನಿರಾಕರಿಸುತ್ತಿರುವ ಅಲ್ಲಿನ ಅಧಿಕಾರಿಗಳು, ನೆರವು ಕೇವಲ ಉಕ್ರೇನ್ ಜನರಿಗೆ ಮೀಸಲು ಎಂದಿದ್ದಾರೆ.

# ತಾತ್ಕಾಲಿಕವಾಗಿ ಮುಷ್ಕರ ಹಿಂಪಡೆದ ದಾವಣಗೆರೆ ವಿವಿ ಗುತ್ತಿಗೆ ನೌಕರರು

ದಾವಣಗೆರೆ, ಫೆ.27 - ತೋಳ ಹುಣಸೆಯ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಬೇಡಿಕೆಗಳ ಈಡೇರಿಕೆಗೆ ನಡೆಸಲಾಗುತ್ತಿದ್ದ ದಾವಣಗೆರೆ ವಿಶ್ವವಿದ್ಯಾನಿಲಯ ಸಿ ಮತ್ತು ಡಿ ಗ್ರೂಪ್ ಹೊರಗುತ್ತಿಗೆ ನೌಕರರ ಅನಿರ್ದಿಷ್ಟ ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ.



ಅಹೋರಾತ್ರಿ ಪ್ರತಿಭಟನೆ ಸ್ಥಳಕ್ಕೆ ವಿಶ್ವವಿದ್ಯಾನಿಲಯದ ಕುಲಪತಿಗಳ ಆದೇಶದ ಮೇರೆಗೆ ವಿವಿ ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ್ ಅವರು ಆಗಮಿಸಿ ಬೇಡಿಕೆಗಳನ್ನು ಪೂರೈಸಿರುವುದಾಗಿ ಭರವಸೆ ನೀಡಿದ ಕಾರಣ ಕುಲಸಚಿವರ ಭರವಸೆಗೆ ಮನ್ನಣೆ ನೀಡಿ ರಾತ್ರಿಯೇ ಪ್ರತಿಭಟನೆಯನ್ನು ಹಿಂಪಡೆಯಲಾಯಿತು ಎಂದು ಸಂಘವು ತಿಳಿಸಿದೆ.

ಈ ವೇಳೆ ಕುಲಸಚಿವರು, ನೌಕರರನ್ನು ಸಂಚಿತ ವೇತನದಡಿ ನೇಮಿಸಿಕೊಳ್ಳಲು ಉನ್ನತ ಶಿಕ್ಷಣ ಇಲಾಖೆಗೆ ವಿಶ್ವವಿದ್ಯಾನಿಲಯದಿಂದ ಶಿಫಾರಸ್ಸಿನ ವಿಸ್ತೃತ ವರದಿ ಸಲ್ಲಿಸಲಾಗುವುದು. ಫೆಬ್ರವರಿ ತಿಂಗಳಿನಿಂದಲೇ ಜಾರಿಯಾಗುವಂತೆ ಈಗ ನೀಡುತ್ತಿರುವ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ 500 ರೂ.ಗಳನ್ನು ಹೆಚ್ಚಿಸಲಾಗುವುದು.

ಏಪ್ರಿಲ್ ತಿಂಗಳಿನಿಂದಲೇ ಕಾರ್ಮಿಕ ಇಲಾಖೆ ನಿಗದಿ ಪಡಿಸುವ ತುಟ್ಟಿಭತ್ಯೆಯನ್ನು ನೀಡಲಾಗುವುದು. 2016ನೇ ಸಾಲಿಗೆ ಸಂಬಂಧಿಸಿದ ಕನಿಷ್ಠ ವೇತನದ ವ್ಯತ್ಯಾಸದ ಹಣಕ್ಕೆ ಸಂಬಂಧಿಸಿದ ಹೈಕೋರ್ಟ್ ರಿಟ್ ಅಪೀಲ್ ಹಿಂಪಡೆದು ನೌಕರರಿಗೆ ಹಣ ಪಾವತಿಸಲಾಗುವುದು. ಮಾರ್ಚ್ ತಿಂಗಳಿನಿಂದ ಭದ್ರತಾ ಸಿಬ್ಬಂದಿಗಳಿಗೆ ವಾರದ ರಜೆ, ತಿಂಗಳ ಸಾಂದರ್ಭಿಕ ರಜೆ, ಯೂನಿಫಾರಂ, ಶೂಗಳನ್ನು ವಿತರಿಸಲಾಗುವುದು. ಇ.ಪಿ.ಎಸ್ ವ್ಯತ್ಯಾಸದ ಹಣಕ್ಕೆ ಕೋರ್ಟನಲ್ಲಿ ಗುತ್ತಿಗೆದಾರರು ನೀಡಿರುವ ತಡೆಯಾಜ್ಞೆ ತೆರವುಗೊಳಿಸಿ ನೌಕರರಿಗೆ ವ್ಯತ್ಯಾಸದ ಇಪಿಎಫ್ ಮೊತ್ತವನ್ನು ಪಾವತಿಸಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ಸಂಘ ತಿಳಿಸಿದೆ.

ಈ ವೇಳೆ ಸಂಘದ ಅಧ್ಯಕ್ಷ ಮಂಜುನಾಥ್ ಕೈದಾಳೆ, ಕಾರ್ಯದರ್ಶಿ ಸಣ್ಣಕೊಟ್ರಗೌಡ, ಕಾರ್ಯಕಾರಿ ಸಮಿತಿ ಉಪಾಧ್ಯಕ್ಷರಾದ ಪ್ರಕಾಶ್, ವಿನುತಾ, ಸುಮಿತ್ರಾ ಸೇರಿದಂತೆ ಹಲವಾರು ಕಾರ್ಮಿಕರು ಇದ್ದರು.

## ಖಾರ್ಕೀವ್‌ಗೆ ನುಗ್ಗಿದ ರಷ್ಯಾ ಸೈನ್ಯ

ಕೀವ್, ಫೆ. 27 – ಉಕ್ರೇನ್‌ನ ಎರಡನೇ ಅತಿ ದೊಡ್ಡ ನಗರವಾದ ಖಾರ್ಕೀವ್ಗೆ ರಷ್ಯಾ ಸೈನ್ಯ ನುಸುಳಿದ್ದು, ನಗರದಲ್ಲಿ ಭಾನುವಾರ ಬೀದಿ ಕಾಳಗ ಆರಂಭವಾಗಿದೆ ಎಂದು ಪ್ರಾಂತೀಯ ಅಧಿಕಾರಿಗಳು ತಿಳಿಸಿದ್ದಾರೆ.

ಖಾರ್ಕೀವ್ ನಗರ ರಷ್ಯಾ ಗಡಿಯಿಂದ 20 ಕಿ.ಮೀ. ದೂರದಲ್ಲಿದೆ. ಗುರುವಾರ ದಾಳಿ ಆರಂಭವಾಗಿದ್ದರೂ, ಇತ್ತೀಚಿನವರೆಗೆ ರಷ್ಯಾ ಸೈನ್ಯ ನಗರದ ಹೊರ ವಲಯದಲ್ಲಿತ್ತು. ರಷ್ಯಾ ಸೈನ್ಯ ನಗರವನ್ನು ದಾಟಿ ಮುಂದೆ ನಡೆದಿತ್ತು. ಆದರೆ, ಭಾನುವಾರ ಬೆಳಿಗ್ಗೆ ಸೈನ್ಯ ನಗರಕ್ಕೆ ನುಗ್ಗಿ ಉಕ್ರೇನ್ ಪಡೆಗಳ ಜೊತೆ ಗುಂಡಿನ ಚಕಮಕಿ ನಡೆಸಿದೆ. ನಾಗರಿಕರು ತಮ್ಮ ಮನೆಗಳಿಂದ ಹೊರ ಬರದಂತೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.



ಹುಟ್ಟುಹಬ್ಬದ ಶುಭಾಶಯಗಳು
ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಶರಣಪ್ಪ ಹೋಟೆಲ್ ಮಾಲೀಕರಾದ
ಶರಣಪ್ಪ
ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ಶುಭ ಕೋರುವವರು
ಸ್ನೇಹಿತರು ಮತ್ತು ಬಂಧುಗಳು
ಶರಣಪ್ಪ ಹೋಟೆಲ್
2ನೇ ಬಸ್ ಸ್ಟಾಪ್, ವಿದ್ಯಾನಗರ, ದಾವಣಗೆರೆ.


## ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ

ದಾವಣಗೆರೆ, ಫೆ.27- ನಗರದ ಕೆಟಿಜೆ ನಗರ 2ನೇ ಮೇನ್, 14ನೇ ಕ್ರಾಸ್‌ನಲ್ಲಿರುವ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಾರ್ಚ್ 1 ರ ಮಂಗಳವಾರ ಮಹಾಶಿವರಾತ್ರಿ ಮಹೋತ್ಸವ ನಡೆಯುವುದು. ಅಂದು ಸಂಜೆ 6.30 ಕ್ಕೆ ಮಹಾಮಂಗಳಾರತಿ ಹಾಗೂ ಪ್ರಸಾದ ಕಾರ್ಯಕ್ರಮ ಇದೆ. ರಾತ್ರಿ 9ಕ್ಕೆ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರಿಯ ವಿಶ್ವ ವಿದ್ಯಾಲಯದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಅವರಿಂದ ಪ್ರವಚನ ನಡೆಯುವುದು.


**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :
ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001. 96861 95327

AQUA SHINE RO WATER PURIFIERS
We Prove Quality & Service


ಅಕ್ವಾ ಶೈನ್
ಆರ್.ಓ. ವಾಟರ್ ಪ್ಯೂರಿಫೈಯರ್
ಕಂಪನಿಯಿಂದ ನೇರ ಮಾರಾಟ ಹಾಗೂ ವಾಟರ್ ಪ್ಯೂರಿಫೈಯರ್‌ನ ಎಲ್ಲಾ ಬಿಡಿಭಾಗಗಳು ಹೋಲ್‌ಸೇಲ್ ದರದಲ್ಲಿ ಲಭ್ಯವಿರುತ್ತವೆ.
ಮೊ. : 9980727767


## ಆರ್.ಎಂ. ರಾಜೇಂದ್ರ ಲಿಂಗೈಕ್ಯ



ದಾವಣಗೆರೆ ಶ್ರೀ ಮಹೇಶ್ವರ ದೈಹಿಕ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರು ಹಾಗೂ ಹಾಲಿ ಚಿತ್ರದುರ್ಗದ ಶ್ರೀ ವೆಂಕಟೇಶ್ವರ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರು, ದಾವಣಗೆರೆ ವಾಸಿ ಕೋಗುಂಡಿ ರಾಮಘಟ್ಟ ಮಠದ ಲಿಂ. ಬಿ. ವಿರೂಪಾಕ್ಷಯ್ಯ ಇವರ ದ್ವಿತೀಯ ಪುತ್ರ

**ರಾಜೇಂದ್ರ ಆರ್.ಎಂ.**

ಇವರು, ದಿನಾಂಕ 27.02.2022ರ ಭಾನುವಾರ ಬೆಳಿಗ್ಗೆ 10.35ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಲಿಂಗೈಕ್ಯರಿಗೆ 49 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಪುತ್ರ, ಪುತ್ರಿ, ಅಪಾರ ಬಂಧು-ಬಳಗವನ್ನು ಅಗಲಿರುವ ಲಿಂಗೈಕ್ಯರ ಅಂತ್ಯಕ್ರಿಯೆಯನ್ನು ದಿನಾಂಕ 28.02.2022ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ಶಾಮನೂರು ಗ್ಲಾಸ್ ಹೌಸ್ ಬಳಿಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಮೊ: 88925 54266, 91130 36260



ssims SPARSH CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
ದಿನಾಂಕ: ಗುರುವಾರ, 3ನೇ ಮಾರ್ಚ್ 2022

ಡಾ. ನವೀನ್ ತಹಶೀಲ್ದಾರ್
MS(Ortho), AOA Fellow (Melbourne, Australia), Combined Neurosurgery & Orthopedic Spine Fellowship (Amrita Institute, Kochi)
ಬೆನ್ನುಹುರಿ ಶಸ್ತ್ರಚಿಕಿತ್ಸಕರು
ದಿನಾಂಕ: ಗುರುವಾರ, 3ನೇ ಮಾರ್ಚ್ 2022

ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



ಹೃದಯಪೂರ್ವಕ ಕೃತಜ್ಞತೆಗಳು
ನಮ್ಮ ಸಂಸ್ಥೆಗೆ ನಾಗರಿಕ ಸೌಲಭ್ಯವುಳ್ಳ ಸಿಎ ಸೈಟ್ ನೀಡುವಂತೆ
ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ
ಶಿಫಾರಸ್ಸು ಮಾಡಿದ ಭಾರತ ಸರ್ಕಾರದ ಮಾಜಿ ಸಚಿವರೂ, ಲೋಕಸಭಾ ಸದಸ್ಯರೂ,
ಹಿರಿಯ ಮುತ್ಸದ್ಧಿಗಳೂ ಆದ ಶ್ರೀ ಜಿ.ಎಂ. ಸಿದ್ದೇಶ್ವರ ಅವರಿಗೂ ಮತ್ತು ದಾವಣಗೆರೆ
ಜಿಲ್ಲಾ ಮಾಜಿ ಉಸ್ತುವಾರಿ ಸಚಿವರೂ, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರೂ,
ಹಿರಿಯ ಮುತ್ಸದ್ಧಿಗಳೂ ಆದ ಶ್ರೀ ಎಸ್.ಎ. ರವೀಂದ್ರನಾಥ್ ಅವರಿಗೂ
ಶ್ರೀಯುತರ ಶಿಫಾರಸ್ಸಿನಂತೆ ನಮ್ಮ ಸಂಸ್ಥೆಗೆ ಸೈಟ್ ಮಂಜೂರಾತಿ ಮಾಡಿಕೊಟ್ಟಿರುವ ದಾವಣಗೆರೆ - ಹರಿಹರ
ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ, ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ಜಿಲ್ಲಾಧ್ಯಕ್ಷರೂ,
ಪ್ರತಿಷ್ಠಿತ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರೂ ಆಗಿರುವ
ಶ್ರೀ ದೇವರಮನೆ ಶಿವಕುಮಾರ್ ಅವರಿಗೂ ಮತ್ತು ದೂಡಾ ಸದಸ್ಯರುಗಳಿಗೂ
ಹೃದಯಪೂರ್ವಕ ಕೃತಜ್ಞತೆಗಳು...
ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು
ಕರ್ನಾಟಕ ಯೂತ್ಸ್ ಅಸೋಸಿಯೇಷನ್, ಶ್ರೀ ಗಣಪತಿ ದೇವಸ್ಥಾನ, ಕೆ.ಆರ್. ರಸ್ತೆ, ದಾವಣಗೆರೆ.

ದೇವರಮನೆ ಶಿವಕುಮಾರ್
ಅಧ್ಯಕ್ಷರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
ಸದಸ್ಯರುಗಳಾದ

ಮಾರುತಿರಾವ್ ಘಾಟ್ಗೆ
ಲಕ್ಷ್ಮಣ
ಬಾತಿ ಚಂದ್ರಶೇಖರ್
ಗೌರಮ್ಮ ವಿ. ಪಾಟೀಲ್


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte